ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ನಗರಾಭಿವೃದ್ಧಿ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಈ ಸದನದ ಸದಸ್ಯರು ಕಳುಹಿಸಿರುವಂತಹ ಪ್ರತಿ ಪ್ರಶ್ನೆಗೂ ಉತ್ತರ ಕೊಡುವುದು ಸರ್ಕಾರದ ಜವಾಬ್ದಾರಿ. ಕೆಲವು ಸಲ ವಿಳಂಬವಾದರೂ ಕೂಡ ಅದನ್ನು ಕಳುಹಿಸುವಂತಹ ಕೆಲಸವನ್ನು ನಾವು ಮಾಡುತ್ತೇವೆ. ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ಕೊಡಿಸುವಂತಹ ಕೆಲಸವನ್ನು ಬೇರೆ ಬೇರೆ ಇಲಾಖೆಗಳಿಂದ ನಾವು ಮಾಡಿಸಿಕೊಡುತ್ತೇವೆ.

ಅಧ್ಯಕ್ಷರು : ಆಯಿತು, ಈಗ ಇದನ್ನು ಮುಕ್ತಾಯ ಮಾಡೋಣ. ಈಗ ವರದಿಯನ್ನೊಪಿಸುವುದು.

3. ವರದಿಯನ್ನೊಪ್ಪಿಸುವುದು:

ಶ್ರೀ ಅಭಯ ಪಾಟೀಲ್ (ಅಧ್ಯಕ್ಷರು, ಅಂದಾಜುಗಳ ಸಮಿತಿ) : ಮಾನ್ಯ ಅಧ್ಯಕ್ಷರೆ 2011–12ನೇ ಸಾಲಿನ ಅಂದಾಜು ಸಮಿತಿಯ ಮೊದಲನೇ ವರದಿಯನ್ನೊಪ್ಪಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಅಧ್ಯಕ್ಷರು : ಶ್ರೀ ಗೂಳಿಹಟ್ಟಿ ಡಿ. ಶೇಖರ್‌ರವರು ಸದನದಲ್ಲಿ ಮಂಡಿಸಲಾಗಿರುವ 2011–12ನೇ ಸಾಲಿನ ಹಕ್ಕು ಬಾಧ್ಯತಾ ಸಮಿತಿಯ ಐದನೇ ವರದಿಯನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು.

4. 2011–12ನೇ ಸಾಲಿನ ಹಕ್ಕು ಬಾಧ್ಯತಾ ಸಮಿತಿಯ ವರದಿಯ ಪರ್ಯಾಲೋಚನೆ (ಬೆಳಗಾವಿಯ ತರುಣ್ ಭಾರತ್ ಪತ್ರಿಕಾ ವರದಿಯಿಂದ ಹಕ್ಕುಚ್ಯುತಿಯಾಗಿರುವ ಬಗ್ಗೆ)

ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಹೊಸದುರ್ಗ) : ಮಾನ್ಯ ಅಧ್ಯಕ್ಷರೆ, 2011–12ನೇ ಸಾಲಿನ ಹಕ್ಕುಬಾಧ್ಯತಾ ಸಮಿತಿಯ ಐದನೇ ವರದಿಯನ್ನು ಪರ್ಯಾಲೋಚಿಸಲು ಸೂಚಿಸಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ಮನವಿಯನ್ನು ಮಾಡುತ್ತೇನೆ. ಶಾಸಕರಾದ ಶ್ರೀ ಅಭಯ ಪಾಟೀಲ್ ಮತ್ತು ಶ್ರೀ ಶ್ಯಾಮಾ

ಭೀಮಾ ಘಾಟಗೆಯವರು ಬೆಳಗಾವಂನಲ್ಲಿ ಇರತಕ್ಕಂಥ ತರುಣ್ ಭಾರತ್ ಪತ್ರಿಕೆಯವರು ಪ್ರಕಟಣೆ ಮಾಡಿರುವ ವಿಚಾರಗಳ ಬಗ್ಗೆ ಹಕ್ಕುಚ್ಯುತಿ ಆಗಿದೆ ಎಂದು ಹೇಳಿ ಮನವಿ ಮಾಡಿದ ಮೇರೆಗೆ ಕೂಲಂಕಷವಾಗಿ ಸಮಿತಿಯ ಪರಿಶೀಲಿಸಿ ವರದಿಯನ್ನು ನಿನ್ನೆ ಸದನದಲ್ಲಿ ತಮ್ಮ ಅಪ್ಪಣೆ ಮೇರೆಗೆ ಮಂಡಿಸಲಾಗಿದೆ. ಅದರಂತೆ ದಯಮಾಡಿ ಮಾನ್ಯ ಅಧ್ಯಕ್ಷರು ಮಾನ್ಯ ಸದಸ್ಯರುಗಳಿಗೆ ಆದ ಹಕ್ಕುಚ್ಯುತಿ ಬಗ್ಗೆ ಸದನದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಟ್ಟು ಸಂಬಂಧಪಟ್ಟ ಪತ್ರಿಕೆಯ ಸಂಪಾದಕರ ಮೇಲೆ ಶಿಸ್ತು ಕ್ರಮ ಮತ್ತು ಇಂಥ ಪ್ರಕರಣಗಳು ಮರುಕಳಿಸಿದಂತೆ ಆ ಪತ್ರಿಕೆಯ ಮಾನ್ಯತೆಯನ್ನು ರದ್ದು ಮಾಡಲಿಕ್ಕೆ ಪತ್ರಿಕಾ ಮಂಡಳಿಗೆ ಶಿಫಾರಸ್ಸು ಮಾಡಬೇಕು. ಗರಿಷ್ಠ ಪ್ರಮಾಣದ ದಂಡನೆಯನ್ನು ಈ ಸದನ ನೀಡಬೇಕು. ಜೊತೆಗೆ ಬಹಿರಂಗವಾಗಿ ಆ ಶಾಸಕರುಗಳಿಗೆ ಆದಂಥ ಅವಮಾನಕ್ಕೆ ಸಂಪಾದಕರು ಕ್ಷಮೆಯನ್ನು ಯಾಚಿಸಬೇಕು. ಮಾನ್ಯ ಶ್ರೀ ಅಭಯ ಪಾಟೀಲ್ ಮತ್ತು ಶ್ರೀ ಶಾಮ್ ಭೀಮ್ ಘಾಟಿಗೆಯವರು ಸುಮಾರು 245 ಪತ್ರಿಕೆಗಳ ತುಣುಕುಗಳನ್ನು ತಮ್ಮ ಸಮಿತಿಗೆ ಒದಗಿಸಿದ್ದರು. ಅದನ್ನು ನಾವು ಗಮನಿಸಿದಾಗ ಬಹಳಷ್ಟು ಗಂಭೀರವಾದ ಅಪಾದನೆಗಳನ್ನು ಅವರು ಮೇಲೆ ಬರುವ ರೀತಿಯಲ್ಲಿ ಅವರ ಹಕ್ಕಿಗೆ ಚ್ಯುತಿಯಾಗುವ ರೀತಿಯಲ್ಲಿ ಆ ಪತ್ರಿಕೆಯವರು ಪ್ರಕಟಣೆ ಮಾಡಿದ್ದಾರೆ. ಶ್ರೀ ಶಾಮಾ ಭೀಮಾ ಘಾಟಿಗೆಯವರಿಗೂ ಸಹ ಅವರ ಹಕ್ಕಿಗೆ ಚ್ಯುತಿಯಾಗುವಂಥ ವರದಿಗಳನ್ನು ತಿರುಚಿ ಅವರ ಪತ್ರಿಕೆಗಳಲ್ಲಿ ವರದಿಯನ್ನು ಮಾಡಿದ್ದಾರೆ. ಇದರ ಬಗ್ಗೆ ನಮ್ಮ ಸಮಿತಿ ವ್ಯಾಪ್ತಿಗೆ ಬಂದಾಗ ಪತ್ರಿಕಾ ಸಂಪಾದಕರಿಗೆ ಅವಕಾಶವನ್ನು ಕೊಟ್ಟಿದ್ದೆವು. ಅವರು ಆರಂಭಿಕವಾಗಿ ಒಂದು ಸಭೆಗೆ ಮಾತ್ರ ಒಂದು ಬೇಜವಾಬ್ದಾರಿಯಾಗಿ ಉತ್ತರ ಕೊಟ್ಟರು. ಅವರಿಗೆ ಎಲ್ಲಾ ತಾತ್ಸಾರ. ಸದನ ಎಂದರೇನು? ಸದನದ ಸದಸ್ಯರೆಂದರೆ ಏನು? ಇವರ ಹಕ್ಕಿಗೆ ಚ್ಯುತಿಯಾಗಿದೆ ಎಂಬ ಭಾವನೆ ಕೂಡ ಅವರಿಗಿಲ್ಲ. ಹಾಗಾಗಿ ನಾನು ಮಾಡಿದ್ದೇ ಸರಿ. ನಾನು ಬರೆದದ್ದೇ ಸರಿ ಎನ್ನುವ ರೀತಿಯಲ್ಲಿ ಅವರು ವರ್ತನೆ ಮಾಡಿದ್ದಾರೆ. ತರುಣ್ ಭಾರತ್ ಪತ್ರಿಕೆ ಏನಿದೆ ಅದು ನಿಜಕ್ಕೂ ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಭಾಷಿಕರ ಮಧ್ಯೆ ಸಾಮರಸ್ಯ ಮಂಡಿಸುವಂಥ ಕೆಲಸದಲ್ಲಿ

ಹುಳಿ ಹಿಂಡುವಂಥ ಕೆಲಸವನ್ನು ಮಾಡುವುದರ ಜೊತೆಗೆ ಎರಡು ರಾಜ್ಯಗಳ ಭಾವನೆಗಳನ್ನು ಕೆರಳಿಸುವಂಥ ಸಾಕಷ್ಟು ವಿಚಾರಗಳನ್ನು ಅದರಲ್ಲಿ ತೋರಿಸಿದ್ದಾರೆ. ಹಾಗಾಗಿ ಅವನ್ನೆಲ್ಲಾ ನಾವು ಕೂಲಂಕಷವಾಗಿ ಹೇಳಿದಾಗ ಅವರಿಗೆ ಸಾಕಷ್ಟು ಅವಕಾಶಗಳನ್ನು ಕೊಟ್ಟೆವು. ಅವರ ಸಮಿತಿಯ ಮುಂದೆ ಬರಲಿಕ್ಕೆ ಸಹ ಆಗಲಿಲ್ಲ. ತದನಂತರ ವಿನಾಕಾರಣ Health grounds ಎಂದು ಹೇಳಿ ಕೆಲವು ಮೆಡಿಕಲ್ ಸರ್ಟಿಫಿಕೇಟ್ಸ್ ಕೊಟ್ಟರು. ಸುಮಾರು ಸಾಕಷ್ಟು ಅವಕಾಶಗಳನ್ನು ಅವರಿಗೆ ಕೊಟ್ಟೆವು. 15 ದಿವಸಗಳವರೆಗೆ ಸಾಕಷ್ಟು ಅವಕಾಶಗಳನ್ನು ಕೊಟ್ಟರೂ ಸಹ ಅವರು ಬೇಜವಾಬ್ದಾರಿಯಿಂದ ಏನು ಮಾಡಿಕೊಳ್ಳುತ್ತಾರೆ ಬಿಡಿ ಎಂದು Medical Certificate produce ಮಾಡಿದರು. ಅದಕ್ಕೂ ನಾವು ಅವಕಾಶ ಕೊಟ್ಟೆವು. ಆದರೆ ಅವರು ಕೊಟ್ಟಿರತಕ್ಕಂಥ ಮೆಡಿಕಲ್ ಸರ್ಟಿಫಿಕೇಟ್ಸ್ ಅನ್ನು ನಾವು ಪರಿಶೋಧನೆ ಮಾಡಿದಾಗ, ಆ ಸರ್ಟಿಫಿಕೇಟ್ ಕೊಟ್ಟಿರುವಂಥ, ಅವರಿಗೆ ಚಿಕಿತ್ಸೆ ನೀಡುತ್ತಿರುವ ಡಾಕ್ಟರ್ ಮಕ್ಕಳ ತಜ್ಞರು. ಮಕ್ಕಳ ತಜ್ಞರಾಗಿದ್ದು ಅವರು ಹೃದಯ ತಜ್ಞರೆಂದು ಹೇಳಿ ಅವರಿಗೆ. heart problem ಆಗಿದೆ. ಅವರಿಗೆ 15 ದಿವಸಗಳ bed rest ನಲ್ಲಿರಬೇಕು. ಎಲ್ಲಿಯೂ ಓಡಾಡುವ ಹಾಗಿಲ್ಲವೆಂದು ಹೇಳಿ date ಹಾಕದಿರುವಂಥ certficate ಕೊಟ್ಟರು. ಆ ಡಾಕ್ಟರ್ ಅನ್ನು ಸಮಿತಿಯ ಮುಂದೆ attend ಮಾಡಲಿಕ್ಕೆ ಹೇಳಿದಾಗ ಅವರು ಬಂದರು. ಅವರು ಪತ್ರಕ್ಕೆ ಸಹಿ ಹಾಕದೆ ಸುಮ್ಮನೆ ಹಾಗೆ ಕೊಟ್ಟಿದ್ದಾರೆ. ಇಬ್ಬರು doctors ಕರೆಸಿದ್ದೆವು. ಆ doctors ಗೆ ಗೊತ್ತಿಲ್ಲ. ಅವರನ್ನು ನಾವು ಕೇಳಿದಾಗ ಅವರು ಇಲ್ಲ ನಮಗೆ ಈ ಸಮಿತಿಯ ಮುಂದೆ Medical Certificate. ಕೊಡುತ್ತಾರೆಂದು ನಮಗೆ ಗೊತ್ತಿರಲಿಲ್ಲ. ದುರುದ್ದೇಶಪೂರ್ವಕವಾಗಿ Medical Certificate ಕೊಟ್ಟಿದ್ದಾರೆ. ನಮ್ಮದೂ ಸಹ ತಪ್ಪಾಗಿದೆ ಎಂದು ವರದಿಯಲ್ಲಿ ಎಲ್ಲಾ ವಿಚಾರಗಳು ಇವೆ. ಅದೇ ರೀತಿ ಹೃದಯ ತಜ್ಞರೂ ಕೂಡ ಅವರು ಪರೀಕ್ಷೆಯನ್ನು ಮಾಡಿಲ್ಲ. ಪರೀಕ್ಷೆಯನ್ನೇ ಮಾಡದೆ Medical Certificate ಕೊಟ್ಟಿದ್ದಾರೆ. ಹಾಗಾಗಿ ಅವರೂ ಕೂಡ ತಮ್ಮ ತಪ್ಪನ್ನು ಸಮಿತಿಯ ಮುಂದೆ ಒಪ್ಪಿಕೊಂಡಿದ್ದಾರೆ. ಜೊತೆಗೆ ಅವರೇನು bed rest ನಲ್ಲಿದ್ದರು ಎಂದು ಹೇಳಿದ್ದರು. ಆಗ ಅವರು bed rest

ನಲ್ಲಿರಲಿಲ್ಲ. ಅವರು ಓಡಾಡುತ್ತಿದ್ದರು. ಅವರ ಬಗ್ಗೆ Police Department ಮೂಲಕ all details ತೆಗೆಸಿದರೆ ಅವರು complete ಮಹಾರಾಷ್ಟ್ರ ಬೇರೆ ರಾಜ್ಯಗಳಲ್ಲಿ rounds ನಲ್ಲಿದ್ದರೇ ಹೊರತು ಸಮಿತಿಯ ಮುಂದೆ attend ಆಗಲಿಲ್ಲ. ಹಾಗಾಗಿ ಸದನ ಸಮಿತಿಯ ಸದಸ್ಯರ ಕರ್ತವ್ಯಗಳನ್ನು ಉಳಿಸಬೇಕು. ಅವರ ಗೌರವನ್ನು ಕಾಪಾಡಬೇಕಾಗುವುದು ಈ ಸದನದ ಕರ್ತವ್ಯವಾಗಿರುತ್ತದೆ. ದಯಮಾಡಿ ಈ ಬಗ್ಗೆ ಮಾನ್ಯ ಅಧ್ಯಕ್ಷರು ಮತ್ತು ಇಡೀ ಸದನ ಯಾವುದೇ ಸದಸ್ಯರಿಗೆ ಮುಂದೆ ಇಂಥ ತೊಂದರೆಗಳು ಬರಬಾರದು, ಮರುಕಳಿಸಬಾರದು ಎಂದು ಇದನ್ನು ಗಂಭೀರವಾಗಿ ಪರಿಗಣಿಸಿ ತರುಣ ಭಾರತ ಪತ್ರಿಕೆಯ ಸಂಪಾದಕರಿಗೆ ಗರಿಷ್ಠರೂಪದ ಶಿಕ್ಷೆಯನ್ನು ನೀಡಬೇಕು. ಪತ್ರಿಕಾ ಮಂಡಳಿಗೆ ಪತ್ರ ಬರೆದು ಅವರ ಮಾನ್ಯತೆಯನ್ನು ರದ್ದುಪಡಿಸಬೇಕು. ಜೊತೆಗೆ ಅವರಿಗೆ ಬಹಿರಂವಾಗಿ ಕ್ಷಮೆಯನ್ನು ಕೇಳಲಿಕ್ಕೆ ತಿಳಿಸಿ ಆ ಶಾಸಕರ ಘನತೆಗೆ, ಹಕ್ಕಿಗೆ ಚ್ಯುತಿಯಾಗದೆ ರೀತಿಯಲ್ಲಿ ಅವರನ್ನು ಈ ಸದನ ಕಾಪಾಡಬೇಕು. ಇದರ ಜೊತೆಗೆ ಯಾವುದೇ ಸದಸ್ಯರಾಗಲಿ. ಪಕ್ಷಭೇದ ಮರೆತು ಯಾವುದೇ ಸದಸ್ಯರ ಹಕ್ಕಿಗೆ ಚ್ಯುತಿ ಆದಂಥ ಸಂದರ್ಭದಲ್ಲಿ ಈ ಸದನ ಅವರ ಸಹಾಯಕ್ಕೆ ಧಾವಿಸಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರಲ್ಲಿ ಮನವಿ ಮಾಡುತ್ತಾ ಈ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತಿದ್ದೇನೆ.

ಶ್ರೀ ಎಂ. ಚಂದ್ರಪ್ಪ (ಹೊಳಲ್ಕೆರೆ) : ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಅಭಯ ಪಾಟೀಲ್‌ರವರ ಮೇಲೆ ಬಹಳಷ್ಟು ಗುರುತರವಾದಂಥ ಆರೋಪಗಳನ್ನು ಮಾಡಿ ಸಮಾಜದಲ್ಲಿ ಅವರ ತೇಜೋವಧೆಯನ್ನು ಮಾಡುವಂಥ ತರುಣ್ ಭಾರತ್ ಪತ್ರಿಕೆಯ ಸಂಪಾದಕರಾಗಿರುವ ಠಾಕೂರ್‌ರವರು ಈ ಸದನದ ಗೌರವಾನ್ವಿತ ಸದಸ್ಯರಾಗಿರುವ ಶ್ರೀ ಅಭಯ್ ಪಾಟೀಲ್‌ರವರಿಗೆ ಬಹಳ ಅವಮಾರ್ಯದೆಯಾಗುವಂಥ ರೀತಿಯಲ್ಲಿ ನಡೆದುಕೊಂಡಿರುವಂಥದ್ದು ಮತ್ತು ಅದೇ ರೀತಿ ನಮ್ಮ ಸದನ ಸಮಿತಿಗೆ ತಪ್ಪು ಮಾಹಿತಿಯನ್ನು ನೀಡಿರುವುದು. ಈ ಎಲ್ಲಾ ವಿಚಾರಗಳನ್ನು ನೋಡಿದರೆ ಅವರು ಪೂರ್ವಾಗ್ರಹಪೀಡಿತರಾಗಿ ವಿಧಾನಸಭೆಯ ಸದಸ್ಯರಿಗೆ

ಅಗೌರವ ತೋರುವ ರೀತಿಯಲ್ಲಿ ನಡೆದುಕೊಂಡಿರತಕ್ಕಂಥ ವಿಚಾರ ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಆ ಕಾರಣದಿಂದ ಆ ಪತ್ರಿಕೆಯನ್ನು ರದ್ದುಪಡಿಸುವುದರ ಜೊತಗೆ ಅವರ ಮೇಲೆ ಮಾನನಷ್ಟ ಮೊಕದ್ದಮೆಯನ್ನು ಹೂಡಲಿಕ್ಕೆ ಅವಕಾಶವನ್ನು ಕೊಡಬೇಕು. ಅದರ ಜೊತೆಗೆ ಅವರ ಮೇಲೆ ಕ್ರಿಮಿನಲ್ ಕೇಸನು ಬುಕ್ ಮಾಡಬೇಕು. ಈ ಒಂದು ಪತ್ರಿಕೆಯನ್ನು ರದ್ದುಪಡಿಸಿಲಿಕ್ಕೆ ಮಾನ್ಯ ಅಧ್ಯಕ್ಷರು ಈ ಒಂದು ಸದನದ ಮೂಲಕ ಅವರಿಗೆ ಛೀಮಾರಿ ಹಾಕಿ ಅವರಿಗೆ ಸರಿಯಾದಂಥ ವ್ಯವಸ್ಥೆಯನ್ನು ಮಾಡಬೇಕು. ಗೌರವಾನ್ವಿತ ಸದಸ್ಯರ ಮೇಲೆ ಇಲ್ಲಸಲ್ಲದ ಆರೋಪಗಳನ್ನು ಮಾಡುವಂಥ ಯಾವುದೇ ಪತ್ರಿಕೆಯಿದ್ದರೂ ಕೂಡ ಸನ್ಮಾನ್ಯ ಅಧ್ಯಕ್ಷರು ಇದರ ಬಗ್ಗೆ ಹೆಚ್ಚು ಗಮನ ಹರಿಸಿ ಅವರ ಮೇಲೆ ಮೊಕದ್ದಮೆಯನ್ನು ಹೂಡಲಿಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಪ್ರಾರ್ಥನೆಯನ್ನು ಮಾಡುತ್ತೇನೆ. ಇದರ ಬಗ್ಗೆ ಸವಿಸ್ತಾರವಾಗಿ ವಿಚಾರಗಳನ್ನು ಬಹಳ ಸದಸ್ಯರು ಮಾತನಾಡುವಂಥವರಿದ್ದಾರೆ. ಇದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂಬ ಮಾತನ್ನು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸುನೀಲ್ ವಿ. ಹೆಗಡೆ (ಹಳಿಯಾಳ) : ತುರಣ್ ಭಾರತ್ ಪತ್ರಿಕೆ ನನ್ನ ಕ್ಷೇತ್ರದಲ್ಲಿ ಬರುತ್ತದೆ. ಈ ಪತ್ರಿಕೆಯ ಒಂದು ವೈಶಿಷ್ಟ ಏನೆಂದರೆ ಶಾಸಕರಿಗೆ, ಜನಪ್ರತಿನಿಧಿಗಳಿಗೆ ವರದಿಯ ಮೂಲಕ ಒಂದು ರೀತಿ blackmail ಮಾಡುವುದು. ಎಲ್ಲಕ್ಕೂ ಮುಖ್ಯವಾಗಿ ಭಾಷಾ ಭಾವನೆಯನ್ನು ಕೆರಳಿಸಿ ನಮ್ಮ ಬೆಳಗಾಂ ಭಾಗದಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರದ ನಡುವೆ ದೊಡ್ಡ ಕಂದಕವನ್ನು ಹುಟ್ಟುಹಾಕಿದ್ದೇ ಈ ಪತ್ರಿಕೆ. ಇವರಿಗೆ ಈ ಪತ್ರಿಕೆಗೆ ಜನಪ್ರತಿನಿಧಿಗಳ ಬಗ್ಗೆ ಗೌರವವಿಲ್ಲ. ನಾನೇ ಎರಡು ಮೂರು ಸಲ ನನ್ನ ಕ್ಷೇತ್ರದಲ್ಲಿ ವರದಿ ಬಂದಾಗ ಆ ಪತ್ರಿಕೆಯ ಸಂಪಾಕದರಿಗೆ ಫೋನ್ ಮಾಡಿದಾಗ ಫೋನ್ ಕೂಡ receive ಮಾಡಲಿಲ್ಲ. ಇಂಥ ಒಂದು ಸಂದರ್ಭದಲ್ಲಿ ಈ ಪತ್ರಿಕೆಯನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ಬ್ಯಾನ್ ಮಾಡುವುದು ಉತ್ತಮವೆಂದು ನನಗೆನ್ನಿಸಿತು. ಏಕೆಂದರೆ ಶಾಸಕರು ಇವತ್ತಿನ ದಿವಸ ಬಹಳ cheap ಆಗಿ ಬಿಟ್ಟಿದ್ದಾರೆ. ಪತ್ರಿಕಾ ಮಾಧ್ಯಮ ಇರಲಿ. ಕಾನೂನಿನ ಪ್ರಕಾರ ಯಾವುದೇ ಒಂದು ವ್ಯವಸ್ಥೆಯಲ್ಲಿ ಶಾಸಕರ ಬಗ್ಗೆ

ಬಹಳಷ್ಟು ಕೆಳಮಟ್ಟದಲ್ಲಿ ಅಗೌರವವಾಗುವ ಸಂಗತಿಗಳು ರಾಜ್ಯದಲ್ಲಿ ನಡೆಯುತ್ತಿವೆ. ಈ ರೀತಿ ಜನಪ್ರತಿನಿಧಿಯಾಗಿ ಶಾಸಕರು ಬಂದ ಮೇಲೆ ಎಲ್ಲಕ್ಕೂ ಶಾಸಕರನ್ನು ದೂಷಣೆ ಮಾಡಿ ಶಾಸಕರನ್ನು ಜವಾಬ್ದಾರಿಯನ್ನಾಗಿ ಮಾಡುವುದು ಎಷ್ಟು ಸಮಂಜಸ ಎಂದು ನಾವು ಕೇಳಬೇಕಾಗುತ್ತದೆ. ನಾವು ಸದಸ್ಯರಾಗಿದ್ದರೂ ಈ ಭಾರತ ದೇಶದ ಪ್ರಜೆಗಳು. ಒಬ್ಬ ಪ್ರಜೆಗೆ ಭಾರತ ದೇಶದಲ್ಲಿ ಸಾರ್ವಭೌಮತ್ವ ಹೇಗಿದೆ. ಜೀವಿಸಲು ಯಾವ ರೀತಿ ಹಕ್ಕಿದೆ ಎಂಬುದನ್ನು ಪತ್ರಿಕಾ ಮಾಧ್ಯಮದವರು ಮರೆತಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ನನ್ನ ವಿನಂತಿಯೇನೆಂದರೆ ಈ ರೀತಿ ಮಾಧ್ಯಮದಲ್ಲಿ ಶಾಸಕರ ಬಗ್ಗೆ ವಿಚಿತ್ರವಾದ ವರದಿಗಳನ್ನು ಪ್ರಕಟಿಸುತ್ತಿದ್ದಾರೆ. ಏಕೆಂದರೆ ನನ್ನ ಬಗ್ಗೆ ಕೂಡ ಹಿಂದೆ ಟಿ.ವಿ. ಮಾಧ್ಯಮದಲ್ಲಿ ಸವಿಸ್ತಾರವಾದಂತಹ ಯಾವುದೇ ವಿಚಾರಗಳನ್ನು ಮಾಡದೆ ಎಲ್ಲಾ ಮಾಧ್ಯಮಗಳಲ್ಲಿ "ಸುನೀಲ್ ವಿ. ಹೆಗಡೆಯವರಿಂದ ಚೆಕ್ ಬೌನ್ಸ್ ಪ್ರಕರಣದಲ್ಲಿ ಹೀಗೆ ಆಗಿದೆ. ಹಾಗಾಗಿದೆಯೆಂದು, ತೊಂದರೆಯಾಗಿದೆ" ಎಂದು ಪ್ರಕಟಿಸಿದ್ದರು. ನಾನೇ ಸ್ವತಃ ಹೋಗಿ ಮಾಧ್ಯಮವರಿಗೆ ಮಾಹಿತಿಯನ್ನು ಕೊಟ್ಟಾಗ ಅದನ್ನು ಅವರು ಗಮನಿಸಿ ಆ ವಿಷಯವನ್ನು ಅಲ್ಲಿಗೆ ಮುಕ್ತಾಯ ಮಾಡಿದ್ದಾರೆ. ಈ ರೀತಿ ಶಾಸಕರ ಮೇಲೆ ಮೇಲಿಂದ ಮೇಲೆ ಮೇಲಿಂದ ಮೇಲೆ ದೌರ್ಜನ್ಯಗಳು ಮಾಧ್ಯಮದಲ್ಲಿರಲಿ ಅಥವಾ ಮತ್ತೊಂದರಲ್ಲಿ ಆಗುತ್ತಿದ್ದರೆ ಜನಪ್ರತಿನಿಧಿಗಳಾದ ನಮಗೆ ಜನರ ನಡುವೆ ಕೆಲಸ ಮಾಡುವುದಕ್ಕೆ ಖಂಡಿತವಾಗಿ ಆಸಾಧ್ಯವಾದಂತಹ ಒಂದು ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇಂತಹ ಒಂದು ಸಂದರ್ಭದಲ್ಲಿ ಮಾನ್ಯ ಅಭಯ್ ಪಾಟೀಲ್‌ರವರ ಮೇಲೆ ಈ ಪತ್ರಿಕೆಯವರು ಮೇಲಿಂದ ಮೇಲೆ ಮೇಲಿಂದ ಮೇಲೆ ಆರೋಪಗಳನ್ನು ಮಾಡಿದ್ದಲ್ಲದೆ, ಹಕ್ಕುಚ್ಯುತಿ ಸಮಿತಿ ಮುಂದೆ ಹಾಜರಾಗುವುದಕ್ಕೆ ನಕಾರ ಮಾಡಿದ್ದಾರೆ. ತಮ್ಮ ಆದೇಶದ ಮೇಲೆ ಹಕ್ಕುಚ್ಯುತಿ ಸಮಿತಿ ರಚನೆಯಾಗಿರುತ್ತದೆ. ಅದರ ಮುಂದೆ ಗೌರವಪೂರ್ವಕವಾಗಿ ಹಾಜರಾಗಿ ಅವರ ಸಮಸ್ಯೆಗಳೇನಾದರೂ ಇದ್ದರೆ ಅದನ್ನು ಕೂಡ ಸಮಿತಿ ಮುಂದೆ ಮಂಡಿಸುವ ಹಕ್ಕು ಅವರಿಗೂ ಕೂಡ ಇರುತ್ತದೆ. ಸರ್ಕಾರದ ಕೆಲವೊಂದು ವಿಷಯಗಳಲ್ಲಿ ಸರ್ಕಾರ ಯಾವುದಾದರೊಂದು ಕಾಯಿದೆಗಳನ್ನು

ಮಾಡಿದ್ದರೆ. ಅದು ಮಹಾರಾಷ್ಟ್ರದ ವಿರುದ್ಧವಾಗಿ, ಮರಾಠಿಗರ ವಿರುದ್ಧವಾಗಿ ಮಾಡಿದ್ದಾರೆಂದು ಇಲ್ಲಸಲ್ಲದ ವಿಚಾರಗಳು ಆ ಪತ್ರಿಕೆಗಳಲ್ಲಿ ಮೇಲಿಂದ ಮೇಲೆ ಬರುತ್ತಿರುತ್ತದೆ. ಇದನ್ನು ಸಹ ಸರ್ಕಾರ ಗಮನಿಸಬೇಕು ಮತ್ತು ಆ ಪತ್ರಿಕೆಯ ಮಾನ್ಯತೆಯನ್ನು ರದ್ದು ಮಾಡಿ, ಈ ರೀತಿ ಅವಹೇಳನಕಾರಿ ಹೇಳಿಕೆಯನ್ನು ಪ್ರಕಟಿಸಿರುವ ಸಂಪಾದಕರಿಗಾಗಲಿ ಅಥವಾ ಅದನ್ನು ಬರೆದಂತಹ ವರದಿಗಾರರಾಗಲಿ ಅತಿ ಹೆಚ್ಚಿನ ರೀತಿಯಲ್ಲಿ ಕಠಿಣವಾದ ಕ್ರಮವನ್ನಾಗಲಿ ಅಥವಾ ಕಠಿಣ ಸಜೆಯನ್ನಾಗಲಿ ಕೊಡುವುದಕ್ಕೆ ಸಾಧ್ಯವಿದೆಯೋ ಅದನ್ನು ಖಂಡಿತವಾಗಿ ಕೊಡುವುದಕ್ಕೆ ಮಾನ್ಯ ಸಭಾಧ್ಯಕ್ಷರು ವ್ಯವಸ್ಥೆ ಮಾಡಬೇಕು. ನಮ್ಮೆಲ್ಲರ custodian ನೀವು ಆದುದರಿಂದ ಶಾಸಕರ ಹಕ್ಕು ಮತ್ತು ಗೌರವವನ್ನು ನೀವೇ ಎತ್ತಿ ಹಿಡಿಯಲ್ಲಿಲ್ಲವೆಂದರೆ ಶಾಸಕರು ನಗೆ ಪಾಟಲಿಗೆ ಈಡಾಗುವುದು. ಬೀದಿ ಪಾಲಾಗುವ ಸಮಯ ಖಂಡಿತವಾಗಿ ಬಹಳ ದಿವಸಗಳು ಉಳಿದಿಲ್ಲ. ಅಧ್ಯಕ್ಷರು ಈ ದಿಸೆಯಲ್ಲಿ ಪ್ರಯತ್ನ ಮಾಡಿ, ಶಾಸಕರ ಹಕ್ಕು ಹಾಗೂ ಗೌರವವನ್ನು ರಕ್ಷಣೆ ಮಾಡಬೇಕೆಂದು ಹೇಳಿ ಈ ಮೂಲಕ ನಾನು ಮಾನ್ಯ ಅಧ್ಯಕ್ಷರಲ್ಲಿ ವಿನಂತಿ ಮಾಡುತ್ತಿದ್ದೇನೆ.

ಅಧ್ಯಕ್ಷರು : ಡಾ|| ಶರಣಪ್ರಕಾಶ್ ರುದ್ರಪ್ಪ ಪಾಟೀಲ್‌ರವರು ಮಾತನಾಡಿ.

ಡಾ|| ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ಈಗಾಗಲೇ ನನ್ನ ಗೆಳೆಯ ಶಾಸಕರೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಇಲ್ಲಿ ಒಂದೇ ಒಂದು ಮಾತನ್ನು ನಾವು ಗಮನಿಸಬೇಕು. ನಾವು freedom of press ಅನ್ನು ಗೌರವಿಸಲೇ ಬೇಕಾಗುತ್ತದೆ. It is considered as the fourth pillar of our Democracy ಆದರೆ, ಕೆಲಸ ಮಾಡತಕ್ಕಂತ ಸಂದರ್ಭದಲ್ಲಿ ಯಾವುದೇ ಒಂದು ಆಧಾರವಿಲ್ಲದೆ, ಆಧಾರ ರಹಿತವಾಗಿರುವ ಆರೋಪಗಳನ್ನು ಮಾಡುವುದರಿಂದ ಯಾವುದೇ ಶಾಸಕರು ಗೌರವದಿಂದ ಕೆಲಸ ಮಾಡುವುದಕ್ಕೆ ಖಂಡಿತ ಸಾಧ್ಯವಾಗುವುದಿಲ್ಲ. ಒಂದೊಂದು ಸಾರಿ ಏನಾಗುತ್ತದೆಂದರೆ, ಕೆಲವೊಂದು ಪತ್ರಿಕೆಗಳನ್ನು ನಾವು ನೋಡಿದಾಗ ಅದು

ಕೇವಲ yellow journalism. ಎಲ್ಲಾ ಪತ್ರಿಕೆಗಳು ಆ ರೀತಿ ಮಾಡುತ್ತವೆಂದು ನಾನು ಹೇಳುತ್ತಿಲ್ಲ. ಕೆಲವೊಂದು ಪತ್ರಿಕೆಗಳು ಹುಟ್ಟಿಕೊಂಡಿರುವುದೇ ಯಾರನ್ನಾದರೂ ಬೈಯುವುದಕ್ಕೆ ಅವರ ಕಸುಬೇನೆಂದರೆ ಅವರು ಹೀಗೆ ಮಾಡಿದರು, ಅವರು ಹಾಗೆ ಮಾಡಿದರೆಂದು ಸುಮ್ಮನೆ ಯಾರನ್ನಾದರೂ ಬೈಯುವುದು. ಅವರು ಬಳಸುವ ಭಾಷೆ ಎಷ್ಟು ಕೆಟ್ಟದ್ದಾಗಿರುತ್ತದೆಂದರೆ ಹೇಳುವುದಕ್ಕೆ ಕೂಡ ನಮಗೆ ನಾಚಿಕೆಯಾಗುತ್ತದೆ. ಆ ರೀತಿಯಲ್ಲಿ ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ಯಾವ ಪತ್ರಿಕೆಗಳು ಚಾಲ್ತಿಯಲ್ಲಿವೆಯೋ ಅವುಗಳಿಗೆ ನೀವು ಕಡಿವಾಣ ಹಾಕಬೇಕು. ಬಹಿರಂಗವಾಗಿ ಪತ್ರಿಕೆಗಳ ವಿರುದ್ಧ ಮಾತನಾಡುವುದಕ್ಕೆ ಹೆದರುವಂತಹ ರಾಜಕೀಯ ವಾತಾವರಣವಿದೆ. ಆದರೂ ಕೂಡ ನಾನು ಧೈರ್ಯದಿಂದ ಹೇಳುತ್ತಿದ್ದೇನೆ. ಯಾವ ಪತ್ರಿಕೆಗಳು ಆಧಾರ ರಹಿತವಾಗಿರುವ ಆರೋಪಗಳನ್ನು ಮಾಡುತ್ತವೆ, ಅಶ್ಲೀಲವಾಗಿರುವ ಭಾಷೆಗಳನ್ನು ಬಳಸುತ್ತವೆ. ಇವತ್ತು ಅವುಗಳಿಗೆ ಕಡಿವಾಣ ಹಾಕಲೇಬೇಕಾಗುತ್ತದೆ. Democracy ಯಲ್ಲಿ ನಾವು benefit of doubt ಯಾವತ್ತಿಗೂ ಕೂಡ ಅವರಿಗೆ ಕೊಟ್ಟುಕೊಂಡು ಬಂದಿದ್ದೇನೆ. ನನ್ನ ಅಭಿಪ್ರಾಯವೇನೆಂದರೆ ಈಗ ಇಲ್ಲಿ ಸ್ಪಷ್ಟವಾಗಿರುವಂತಹ ಶಾಸಕರ ಹಕ್ಕಿನ ಬಾಧ್ಯತೆಯಾಗಿದೆ. ಅವರಿಗೆ ಅವಕಾಶಗಳನ್ನು ಕೊಟ್ಟರೂ ಕೂಡ ಅವರು ಅದಕ್ಕೆ ಸ್ಪಷ್ಟವಾದ ಉತ್ತರವನ್ನು ಕೊಡುವುದಕ್ಕಾಗಿಲ್ಲ ಹಾಗೂ ಅದಕ್ಕೆ ಉತ್ತರ ಕೊಡುವ ಗೋಜಿಗೂ ಕೂಡ ಅವರು ಹೋಗಿಲ್ಲ. ನನಗೆ ವರದಿಯನ್ನು ಸಂಪೂರ್ಣವಾಗಿ ಓದುವುದಕ್ಕಾಗಿಲ್ಲ. ಅದರೂ ನಾನು part of the report ಅನ್ನು ಓದಿದ್ದೇನೆ. ಅವರು ನಿಮಗೆ ಬಂದು ಸ್ಪಷ್ಟೀಕರಣ ಕೊಡುವುದಕ್ಕೆ ಹೋಗಿಲ್ಲ. ಹಾಗಾದರೆ ಇವತ್ತು ಒಂದು ಸಮಿತಿಯ ಕಾರ್ಯವೈಖರಿ, ಅವರು ಕೆಲಸ ಮಾಡುವ ಸಂದರ್ಭದಲ್ಲಿ ಅವರಿಗೆ ಗೌರವ ಕೊಡದಿದ್ದರೆ ಈ ಸಮಿತಿಯು ಏಕೆ ಇರಬೇಕು? ಯಾವುದೇ ಶಾಸಕರ ಹಕ್ಕು ಬಾಧ್ಯತೆಯಾದರೆ, ಅವರು ಹಕ್ಕು ಬಾಧ್ಯತಾ ಸಮಿತಿಗೆ refer ಮಾಡುತ್ತಾರೆ. ಆ ಸಮಿತಿ ತೆಗೆದುಕೊಂಡಿರುವ ನಿರ್ಣಯಕ್ಕೆ ಒಂದು ವೇಳೆ ಅದಕ್ಕೆ end result ಇಲ್ಲವೆಂದಾದರೆ ಇದು ಆ ಸಮಿತಿಗೂ ಕೂಡು ಒಂದು ರೀತಿಯ ಅಗೌರವವಾಗುತ್ತದೆ. ಅದಕ್ಕಾಗಿ ನನ್ನ ಮನವಿಯೇನೆಂದರೆ ಇದರಿಂದ

ಒಂದು ಸಂದೇಶ ಹೋಗಬೇಕು. ಏನು ಸಂದೇಶ ಹೋಗಬೇಕೆಂದರೆ ಇವತ್ತು ಪತ್ರಿಕೆಗಳಾಗಿರಲಿ ಅಥವಾ ಯಾವುದೇ ಮಾಧ್ಯಮವಾಗಿರಲಿ ಸತ್ಯ ಹೇಳುವಂತಹ ಸಂಪೂರ್ಣವಾದ freedom ಇದೆ. ಆ ವಿಷಯ ಸತ್ಯವಾಗಿದ್ದರೆ, ಅದು ಸತ್ಯದಿಂದ ಕೂಡಿದ್ದ, ನ್ಯಾಯಬದ್ಧವಾಗಿದ್ದರೆ ಏನು ಬೇಕಾದರೂ ಹೇಳಲಿ ಅದನ್ನು prove ಮಾಡಲಿ. ಅದಕ್ಕೆ ಅವರಿಗೆ ಸಂಪೂರ್ಣವಾದ ಅವಕಾಶವಿದೆ. ಆದರೆ ಸತ್ಯಕ್ಕೆ ದೂರವಾಗಿರುವ, ಆಧಾರ ರಹಿತವಾಗಿರುವ, ಅಶ್ಲೀಲ ಭಾಷೆಗಳಲ್ಲಿ ಅಥವಾ ಯಾರನ್ನಾದರೂ ತೇಜೋವಧೆ ಮಾಡುವ ರೀತಿಯಲ್ಲಿ ಯಾವುದೇ ಮಾಧ್ಯಮ ಒಂದು ವೇಳೆ ಯಾವುದೇ ಒಬ್ಬ ವ್ಯಕ್ತಿಯ ಬಗ್ಗೆ ಪ್ರಕಟಿಸಿದ್ದರೆ ಅದಕ್ಕೆ ಕಡಿವಾಣ ಹಾಕಲೇಬೇಕಾಗುತ್ತದೆ. ಅದಕ್ಕೆ ಇದೊಂದು ನಿದರ್ಶನವಾಗಬೇಕೆಂಬುದು ನನ್ನ ಅಭಿಪ್ರಾಯ.

ಡಾ॥ ಎಂ.ಸಿ. ಸುಧಾಕರ್ (ಚಿಂತಾಮಣಿ) : ಈಗಾಗಲೇ ನಮ್ಮ ಎಲ್ಲಾ ಶಾಸಕ ಸ್ನೇಹಿತರು ಹೇಳಿದ ಹಾಗೆ ಇದು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾದ ವಿಚಾರ. ಯಾವುದೇ ಸಂದರ್ಭದಲ್ಲಿ ಇವತ್ತು ಸಮಾಜದಲ್ಲಿ ನಾನಾ ರೀತಿಯಾದ ಸಂಘಟನೆಗಳು ಅಥವಾ ಸರ್ಕಾರಿ ಸ್ವಾಮ್ಯದ ಅಧಿಕಾರಿಗಳಿರಬಹುದು ಅಥವಾ ಮತ್ತೊಬ್ಬರಿರಬಹುದು ಯಾವುದೇ ಒಂದು ಸಂದರ್ಭದಲ್ಲಿ ಅವರ ಮೇಲೆ ಆದಂತೆ ಅಪಮಾನ ಅಥವಾ ದೌರ್ಜನ್ಯಗಳು ಆದಾಗ ದೊಡ್ಡ ಪ್ರಮಾಣದಲ್ಲಿ ಹೋರಾಟಗಳನ್ನು ಮಾಡುತ್ತಾರೆ. ಆದರೆ ಇವತ್ತು ಸಾರ್ವಜನಿಕರ ಬದುಕಿನಲ್ಲಿರುವ ಶಾಸಕರ ಮೇಲೆ ಒಂದು ರೀತಿಯಾಗಿ ತೇಜೋವಧೆ ಮಾಡುವುದು, ಆಧಾರ ರಹಿತವಾಗಿ ವರದಿಗಳನ್ನು ಪ್ರಕಟಣೆ ಮಾಡುವುದನ್ನು ಬಹಳಷ್ಟು ಕಡೆ ಗಮನಿಸುತ್ತಿದ್ದೇವೆ. ಎಲ್ಲೋ ಒಂದು ಕಡೆ ಇವತ್ತು ನಮ್ಮ ಹಕ್ಕುಗಳನ್ನು ರಕ್ಷಣೆ ಮಾಡಿಕೊಳ್ಳುವಂತಹ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟಿದ್ದೀರಿ. ಈ ಒಂದು ಸಮಿತಿಯವರು ಶಿಫಾರಸ್ಸು ಮಾಡಿದ್ದಾರೆ. ಆ ಶಿಫಾರಸ್ಸುಗಳನ್ವಯ ಬಹಳ ಕಠಿಣವಾಗಿ ನಾವು ಅವರಿಗೆ ಶಿಕ್ಷೆಯನ್ನು ಕೊಡಬೇಕಾಗುತ್ತದೆ. ಅದು ನೀವು ಜೈಲಿಗೆ ಕಳುಹಿಸುತ್ತಿರೋ ಅಥವಾ ಇನ್ನಾವ ರೀತಿಯ ಕ್ರಮ ಕೈಗೊಳ್ಳುತ್ತೀರೋ, ಅದು ಎಲ್ಲಾ ಶಾಸಕರ ಅಭಿಪ್ರಾಯದ ಮೇರೆಗೆ ತರುಣ್

ಭಾರತ್ ಎಂಬ ಮರಾಠಿ ದಿನ ಪತ್ರಿಕೆಯ ವಿಚಾರವಿರಬಹುದು, ಮತ್ತೊಂದು ವಿಚಾರವೇನೆಂದರೆ ಈ ಸದನ ಸೃಷ್ಟಿ ಮಾಡಿರತಕ್ಕಂಥ ಹಲವಾರು ಸಮಿತಿಗಳಿವೆ. ಈ ಸಮಿತಿಗಳಲ್ಲಿ ಅಧ್ಯಕ್ಷರು, ಸದಸ್ಯರು ನನ್ನ ಶಾಸಕರ ಮಿತ್ರರಿದ್ದಾರೆ. ಸಮಿತಿಗಳಿಗೆ ಕೂಡ ಬಹಳಷ್ಟು ಅಧಿಕಾರಿಗಳು ಸಮರ್ಪಕವಾದ ಉತ್ತರಗಳನ್ನು ಕೊಡುವಂತಹದ್ದು ಮತ್ತು ಸಮಿತಿ ಬಗ್ಗೆ ಅಗೌರವವನ್ನು ತೋರಿಸುವಂತಹ ಹಲವಾರು ಉದಾಹರಣೆಗಳನ್ನು ನಾವು ನೋಡುತ್ತಿದ್ದೇವೆ. ಎಲ್ಲೋ ಒಂದು ಕಡೆ ಈ ಸದನಕ್ಕಿರುವ ಪ್ರಾಮುಖ್ಯತೆಯನ್ನು ಗಮನದಲ್ಲಿಟ್ಟುಕೊಂಡು ಅವರೂ ಯಾವ ರೀತಿ ಸದನಕ್ಕೆ ಗೌರವ ಕೊಡಬೇಕೆಂಬ ನಿಟ್ಟಿನಲ್ಲಿ ಬಹಳ ಗಂಭೀರವಾಗಿ ಅದನ್ನು ಪರಿಗಣಿಸಬೇಕು ಎಂಬ ಮಾತನ್ನು ಹೇಳುವ ಜೊತೆಗೆ ಇತ್ತೀಚೆಗೆ ಬಹಳಷ್ಟು ಶಾಸಕರು, ಎಷ್ಟು ಜನ ಶಾಸಕರು ಹೇಳುತ್ತಾರೋ ಗೊತ್ತಿಲ್ಲ ಒಂದು magazine ನವರು ಬಹುಶಃ ಎಂಟು-ಒಂಬತ್ತು ತಿಂಗಳುಗಳಿಂದ ಅವರು ಶಾಸಕರ ಬಳಿ ಹೋಗುತ್ತಿದ್ದಾರೆ. ಇವತ್ತು ನಗರ ಸಭೆ ಸದಸ್ಯರ ಬಳಿಯೂ ಹೋಗುತ್ತಿದ್ದಾರೆ, ಅವರು ಮುಖ್ಯವಾಗಿ ಮಹಿಳೆಯವರನ್ನು ಕಳುಹಿಸುವ ಕೆಲಸವನ್ನು ಮಾಡುತ್ತಿದ್ದಾರೆ. ನಾವು ಸರ್ವೆ ಮಾಡಿದ್ದೇವೆ. ಈ ಸರ್ವೆಯಲ್ಲಿ ನಿಮಗೆ ಒಳ್ಳೆ ಅಂಕ ಬಂದಿದೆ. ನೀವು ಬಹಳಷ್ಟು ಕೆಲಸ ಕಾರ್ಯಗಳನ್ನು ಮಾಡಿದ್ದೀರೆಂದು ಹೇಳಿ ಒಳ್ಳೆ ರೀತಿಯಲ್ಲಿ ಅವರನ್ನು ಮರುಳು ಮಾಡುವ ಕೆಲಸವನ್ನು ಮಾಡಿ. ನಂತರ ನಿಮ್ಮ ಬಗ್ಗೆ ನಮ್ಮ ಪತ್ರಿಕೆಯಲ್ಲಿ ಮ್ಯಾಗ್‌ಜೀನ್‌ನಲ್ಲಿ ಬರೆಯುತ್ತೇವೆ ಹಣ ಕೊಡಿ ಎಂದು ಹೇಳಿ ಬಹಳಷ್ಟು ಜನರ ಹತ್ತಿರ ಹಣ ವಸೂಲು ಮಾಡಿದ್ದಾರೆ. ಆದರೆ ಇವತ್ತು ಯಾರೂ ಬಾಯಿ ಬಿಡುತ್ತಿಲ್ಲ. ಬಹಳಷ್ಟು ಜನರ ಹತ್ತಿರ ಹಣ ವಸೂಲು ಮಾಡಿದ್ದಾರೆ. ಆದರೆ ಮ್ಯಾಗ್‌ಜೀನ್‌ಗಳನ್ನು ಇವತ್ತು.ಯಾರೂ ನೋಡೇ ಇಲ್ಲ. ಯಾರದೋ ಒಂದೆರಡು ಪತ್ರಿಕೆಗಳನ್ನು ಮ್ಯಾಗ್‌ಜೀನ್‌ಗಳನ್ನು ತಂದು ತೋರಿಸಿ ಹಣ ಸುಲಿಗೆ ಮಾಡುವುದು ಬಹಳಷ್ಟು ಕಡೆ ಆಗಿದೆ. ಅದರಲ್ಲಿ ನನ್ನನ್ನೂ ಸೇರಿಸಿ ಹೇಳುತ್ತಿದ್ದೇನೆ, ಏಕೆಂದರೆ ನಾವು ಅದಕ್ಕೆ ಬಲಿಯಾಗಿರುವವರು, ನನ್ನನ್ನು ಹೊರತುಪಡಿಸಿಯಲ್ಲ. ಏಕೆಂದರೆ ಸತ್ಯ ಇರುವುದನ್ನು ಹೇಳುತ್ತಿದ್ದೇನೆ. ಇದು ಇಲ್ಲಿಗೆ ನಿಲ್ಲಲಿಲ್ಲ. ನಗರ ಸಭಾ ಸದಸ್ಯರು ನನಗೆ ಫೋನ್ ಮಾಡಿ

ಹೇಳುತ್ತಿದ್ದಾರೆ. ನಾನು ಅವರಿಗೆ ಮೊದಲ ಪೊಲೀಸ್ ಕಂಪ್ಲೇಟ್ ಕೊಡಿ. ಅವರನ್ನು ಹಿಡಿದು ಕೊಡಿಯೆಂದು ಹೇಳಿದೆ. ಇದೊಂದು ಅಭ್ಯಾಸ ಮಾಡಿಕೊಂಡಿದ್ದಾರೆ. ನನಗೆ ಕೆಲವು ಶಾಸಕರು ಕೂಡ ಫೋನ್ ಮಾಡಿದ್ದರು. ಅವರನ್ನು ನಂಬಬೇಡಿ ಅದು ಮೋಸವೆಂದು ಹೇಳಿದೆ. ಈ ರೀತಿಯಾದ ಪರಿಸ್ಥಿತಿಯಲ್ಲಿ ಒಂದು ಮಾತು ಮಾತನಾಡಿದರೂ ಕಷ್ಟ ಒಂದು ಮಾತು ಹೇಳದಿದ್ದರೂ ಕಷ್ಟ. ಇವರು ನಮಗೇನೂ ಸ್ಪಂದಿಸುತ್ತಿಲ್ಲವೆಂದು ಹೇಳಿ ಕೆಟ್ಟದ್ದಾಗಿ ಬರೆಯುವುದು, ಈ ರೀತಿ ಬ್ಲ್ಯಾಕ್‌ಮೇಲ್ ತಂತ್ರಗಾರಿಕೆ ಬಹಳಷ್ಟಾಗುತ್ತಿದೆ. ದಯವಿಟ್ಟು ತಾವು ಈ ಸದನದ ಪ್ರತಿಯೊಬ್ಬ ಸದಸ್ಯರ ರಕ್ಷಣೆಗೆ ನಿಲ್ಲಬೇಕಾಗುತ್ತದೆ. ಇದನ್ನು ಈ ರೀತಿ ಹಗುರವಾಗಿ ತೆಗೆದುಕೊಳ್ಳುವ ಪರಿಸ್ಥಿತಿ ಆಗಬಾರದು, ಬಹಳ ಗಂಭೀರವಾಗಿ ಇದನ್ನು ತೆಗೆದುಕೊಳ್ಳಬೇಕು. ಜೈಲು ಶಿಕ್ಷೆಯನ್ನು ವಿಧಿಸಿದಾಗ ಮಾತ್ರ ಖಂಡಿತವಾಗಿ ಎಲ್ಲೋ ಒಂದು ಕಡೆ ಭಯ ಬರುತ್ತದೆ. ಈ ರೀತಿ ವಿನಾ ಕಾರಣ ಶಾಸಕರನ್ನು ಹಗುರವಾಗಿ ಪರಿಗಣಿಸುವುದು ಕೀಳು ಮಟ್ಟದ ರೀತಿಯಲ್ಲಿ ಬಿಂಬಿಸುವಂತಾದರೆ, ಶಾಸಕರೆಲ್ಲರೂ ವಿದ್ಯಾವಂತರಾಗಿದ್ದು, ನಮ್ಮದೇ ಆದಂತಹ ಒಂದು ಶೈಲಿಯನ್ನು ಸಮಾಜದಲ್ಲಿ ರೂಪಿಸಿಕೊಂಡು ಜನರ ಮಧ್ಯೆ ಕಷ್ಟಪಟ್ಟು ಬಂದಿರುತ್ತೇವೆ. ಸುಮ್ಮನೆ ಪುಕ್ಕಟೆಯಾಗಿ ಬಂದಿರುವುದಿಲ್ಲ. ಒಳ್ಳೆಯ ರೀತಿಯಲ್ಲಿ ಕಾರ್ಯವನ್ನು ನಿರ್ವಹಿಸಬೇಕೆಂಬ ಮನಸ್ಸನ್ನು ಇಟ್ಟುಕೊಂಡು ಇಲ್ಲಿ ಬಂದಿದ್ದೇವೆ. ಆದ್ದರಿಂದ ಇಲ್ಲಿನ ವ್ಯವಸ್ಥೆ ನಮ್ಮಿಂದ ಕೆಟ್ಟಿರುವುದಿಲ್ಲ, ಇಡೀ ಸಮಾಜದ ವ್ಯವಸ್ಥೆ ಪರಿವರ್ತನೆಯಾಗಬೇಕು. ಯಾರೋ ಕೆಲವರು ಮಾತ್ರ ಶಾಸಕರನ್ನು, ಮತ್ತೊಬ್ಬರನ್ನು ಸ್ವಾರ್ಥಕ್ಕಾಗಿ ಬಳಸಿಕೊಂಡು ತೇಜೋವಧೆ ಮಾಡುತ್ತಿರುವ ವಿಚಾರ ನಾವುಗಳು ಹಗುರವಾಗಿ ತೆಗೆದುಕೊಳ್ಳಬಾರದು. ಸದಸ್ಯರೆಲ್ಲರೂ ಇದಕ್ಕೆ ಬೆಂಬಲ ಕೊಡುತ್ತಾರೆಂದು ಭಾವಿಸುತ್ತಾ ಈ ವಿಚಾರವು ಇಲ್ಲಿಯೇ ಪ್ರಾರಂಭವಾಗಬೇಕು. ಇನ್ನೂ ಮುಂದೆ ಪತ್ರಿಕೆಯಲ್ಲಿ ಬರೆಯಬೇಕಾದರೆ ಆಧಾರಗಳನ್ನಿಟ್ಟುಕೊಂಡು ಯೋಚನೆ ಮಾಡಿ ಬರೆಯಬೇಕು, ಆಗ ಮಾತ್ರ ನಾವು ಅದನ್ನು ಗೌರವಿಸಬೇಕು. ಆಧಾರರಹಿತವಾಗಿ ಬರೆಯುವುದಕ್ಕೆ ದಯಮಾಡಿ ಕಡಿವಾಣ ಹಾಕಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಎಂ. ಅಶೋಕ್ : ಮಾನ್ಯ ಅಧ್ಯಕ್ಷರೆ, ಇಂದು ಮಾನ್ಯ ಶಾಸಕರುಗಳಾದ ಶ್ರೀ ಅಭಯ್ ಪಾಟೀಲ್ ಹಾಗೂ ಶ್ರೀ ಶಾಮಾ ಭೀಮಾ ಘಾಟಗೆ ಅವರ ಮೇಲೆ ತರುಣ್ ಭಾರತ್ ಮರಾಠಿ ಪತ್ರಿಕೆಯ ಸಂಪಾದಕರಾದ ಶ್ರೀ ಕಿರಣ್ ಠಾಕೂರ್ ರವರು ಅವಾಚ್ಯ ಶಬ್ದಗಳಿಂದ ಹಾಗೂ ಬ್ಲ್ಯಾಕ್‌ಮೇಲ್ ತಂತ್ರವನ್ನು ಉಪಯೋಗಿಸಿದ್ದಾರೆಂಬುದು ಈಗಾಗಲೇ ಸದನದಲ್ಲಿ ಎಲ್ಲರಿಗೂ ತಿಳಿದಿದೆ. ಈ ಸಂಬಂಧ ಸಮಿತಿಯವರು ವರದಿಯನ್ನೂ ಸಹ ಸಲ್ಲಿಸಿದ್ದಾರೆ. ಇದೇ ರೀತಿಯಲ್ಲಿ ಬೇಕಾದಷ್ಟು ಜನ ಬೇಕಾದಷ್ಟು ಪತ್ರಿಕೆಯವರು ಇದೇ ರೀತಿ ಬರೆಯುತ್ತಿದ್ದಾರೆ. ಈ ಬಗ್ಗೆ ಯಾರೂ ಧೈರ್ಯ ಮಾಡಿ ಕಂಪ್ಲೆಂಟ್ ಕೊಡದೇ al least ಶ್ರೀ ಅಭಯ್ ಪಾಟೀಲ್ ಹಾಗೂ ಘಾಟಗೆ ಅವರು ಧೈರ್ಯ ಮಾಡಿ ಕಂಪ್ಲೆಂಟ್ ಕೊಟ್ಟಿದ್ದಾರೆ. ಅವರಿಗೆ ಬುದ್ಧಿ ಕಲಿಸುವ ಪ್ರಯತ್ನ ಮಾಡಿರುವುದಕ್ಕೆ ಮೊದಲಿಗೆ ಅವರುಗಳಿಗೆ ಅಭಿನಂದನೆ ಸಲ್ಲಿಸುತ್ತಿದ್ದೇನೆ. ನನ್ನ ಸ್ನೇಹಿತರಾದ ಮುಳಬಾಗಿಲು ಕ್ಷೇತ್ರದ ಶಾಸಕರಾದ ಶ್ರೀ ಅಮರೇಶ್ ಅವರು ಬೆಂಗಳೂರು ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ "ನನ್ನ ಮೇಲೂ ಸಹ' ಅವಾಚ್ಯ ಶಬ್ದಗಳಿಂದ ಹಾಗೂ ಬ್ಲ್ಯಾಕ್‌ಮೇಲ್ ತಂತ್ರ ಉಪಯೋಗಿಸಿ ನನ್ನ ಮೇಲೂ ಕೂಡ ಬರೆದಿದ್ದಾರೆ" ಎಂದು ಈಗ ತಾನೇ ಹೇಳಿದರು. ಬಹಳಷ್ಟು ಶಾಸಕರನ್ನು ಈ ಪತ್ರಿಕೆಗಳು ತೇಜೋವಧೆ ಮಾಡುತ್ತಿವೆ. ಶ್ರೀ ಅಭಯ್ ಪಾಟೀಲ್ ಅವರ ಪ್ರಕರಣವನ್ನೇ ಆಧಾರವಾಗಿಟ್ಟುಕೊಂಡು ಅವರಿಗೆ ತಕ್ಕ ಶಿಕ್ಷೆ ಮಾಡಬೇಕೆಂದು ಹೇಳುತ್ತಿದ್ದೇನೆ. ಅಲ್ಲದೆ ಸುಮ್ಮ ಸುಮ್ಮನೆ ಡಾಕ್ಟರ್ ಸರ್ಟಿಫಿಕೇಟ್ ಕೊಟ್ಟಿರುವುದು ಗಮನಕ್ಕೆ ಬಂದಿರುವುದನ್ನು ವರದಿಯಲ್ಲಿ ಓದಿದ್ದೇನೆ. ಡಾಕ್ಟರ್ ಸರ್ಟಿಫಿಕೇಟ್ ಕೊಟ್ಟಿರುವವರು ಸಹ ಬಂದು ನಾವು ಕೊಟ್ಟಿರುವುದು ತಪ್ಪು ಎಂದು ಹೇಳಿದೆ ಮೇಲೆ. ಅವರ ಮೇಲೂ ಕ್ರಮ ತೆಗೆದುಕೊಳ್ಳಬೇಕು. ಹೇಳಿಕೆ ಕೊಟ್ಟು ತಪ್ಪಾಯ್ತು ಎಂದು ಹೇಳುವುದಲ್ಲ. ಇನ್ನು ಮುಂದೆ ಯಾರೂ ಸಹ ಈ ರೀತಿಯ ಸರ್ಟಿಫಿಕೇಟ್‌ಗಳು ಕೊಡದ ರೀತಿಯಲ್ಲಿ ನೋಡಿಕೊಳ್ಳಬೇಕು ಮತ್ತು ಅವರ ಮೇಲೂ ಸಹ ಸಣ್ಣದೊಂದು ಶಿಕ್ಷೆಯನ್ನು ವಿಧಿಸಬೇಕು. ಇಲ್ಲದಿದ್ದರೆ ಹಾಗೆಯೇ ಇದು ಮುಂದುವರೆಯುತ್ತದೆ. ಯಾರು ದುಡ್ಡನ್ನು ಕೊಡುತ್ತಾರೋ ಅವರಿಗೆ

ಸರ್ಟಿಫಿಕೇಟ್ ಕೊಡುವುದರಲ್ಲಿಯೂ ಸಹ ಅವ್ಯವಹಾರ ನಡೆದಿದೆ. ಇನ್ನೊಂದು ಬಹಳ ಗಂಭೀರವಾದ ವಿಚಾರವೆಂದರೆ ಪತ್ರಿಕೆಗಳಲ್ಲ. ಟಿ.ವಿ. ಮಾಧ್ಯಮಗಳಲ್ಲೂ ಸಹ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರಾಗಲಿ, ಶ್ರೀ ಸದಾನಂದ ಗೌಡರಾಗಲಿ, ನಮ್ಮ ನಾಯಕರಾದ ಶ್ರೀ ಸಿದ್ದರಾಮಯ್ಯನವರಾಗಲಿ, ಅಣಕು ರೀತಿಯಲ್ಲಿ ಅಂದರೆ ಕಾರ್ಟೂನ್‌ಗಳ ರೀತಿಯಲ್ಲಿ ತೋರಿಸುವ ಹಾಗೆ ತೋರಿಸುತ್ತಾರೆ. ಸಣ್ಣ ಸಣ್ಣ ಮಕ್ಕಳ ರೀತಿಯಲ್ಲಿ ನಾವುಗಳು ನಗೆಪಾಟಲಿಗೀಡಾಗುತ್ತಿದ್ದೇವೆ, ನಾವೆಲ್ಲಾ ಜೋಕರ್‌ಗಳಾಗಿದ್ದೇವೆ. 'Kanta I don't like it, I don't like it' ಎಂದು ಹೇಳುತ್ತಾ ಶಾಸಕರೆಲ್ಲರನ್ನೂ ಹರಾಜು ಹಾಕುತ್ತಿದ್ದಾರೆ, ಅವರನ್ನು ಕೇಳುವವರೇ ಗತಿಯಿಲ್ಲವೇ? ಅವರು ಹೇಳಿದ್ದೇ ಆಟ, ನಾವು ಏನಾದರೂ ಮಾತನಾಡಿದರೆ ನಮ್ಮನ್ನು ವ್ಯಂಗ್ಯವಾದ ರೀತಿಯಲ್ಲಿ ತೋರಿಸಿ ಬಿಡುತ್ತಾರೆ. ಆದ್ದರಿಂದ ಪತ್ರಿಕೆಗಳ ಮೇಲೆ ಅಲ್ಲ, ಟಿ.ವಿ. ಮಾಧ್ಯಮದವರ ಮೇಲೂ ಕೂಡ ಕ್ರಮ ತೆಗೆದುಕೊಳ್ಳಬೇಕು. ಶ್ರೀ ಸಿದ್ದರಾಮಯ್ಯನವರು, ಶ್ರೀ ಯಡಿಯೂರಪ್ಪನವರು ಮಾತನಾಡಬೇಕಾದರೆ ಅವರುಗಳ ಧ್ವನಿಗೆ ಬದಲಾಗಿ ಕಾರ್ಟೂನ್ ಧ್ವನಿಯನ್ನು ಅಳವಡಿಸುತ್ತಾರೆ. ತಲೆಯನ್ನು ದಪ್ಪವಾಗಿ ಮಾಡಿ ಕೈ ಕಾಲುಗಳನ್ನು ಸಣ್ಣ ಮಾಡಿ ಒಂದು ರೀತಿಯಲ್ಲಿ handicap ಗಳಾಗಿ ಮಾಡುತ್ತಾರೆ. ಆದ್ದರಿಂದ ಸಭೆಯ ಮುಖಾಂತರ ಕೇಳಿ ಕೊಳ್ಳವುದೇನೆಂದರೆ ಟಿ.ವಿ. ಮಾಧ್ಯಮಗಳೂ ಕೂಡ ಈ ರೀತಿ ಬಿತ್ತರಿಸುವುದನ್ನು ನಿಲ್ಲಿಸಬೇಕು. ನಾವೇನಾದರೂ ತಪ್ಪು ಮಾಡಿದರೆ ಅದನ್ನು ತಿದ್ದಿ ಬರೆಯಿರಿ; ಅಗ appreciate ಮಾಡುತ್ತೇವೆ. ಅದು ಬಿಟ್ಟು ಅವಹೇಳನಕಾರಿಯಾಗಿ, handicap ಗಳಾಗಿ ಮಾಡಿ ತೋರಿಸುವುದು, ಧ್ವನಿಯನ್ನು ಬದಲಾವಣೆ ಮಾಡುವುದು. ಅವಾಚ್ಯ ಶಬ್ದಗಳಿಂದ ನಿಂದಿಸುವುದು, ಯಡಿಯೂರಪ್ಪನವರು ದೇವರಿಗೆ ನಮಸ್ಕಾರ ಮಾಡುತ್ತಿರುವುದು, ಪೂಜೆ ಮಾಡುವ ಚಿತ್ರ ತೋರಿಸುವುದು, ಶ್ರೀ ಈಶ್ವರಪ್ಪನವರು ಶಾಸ್ತ್ರದವರ ಹತ್ತಿರ ಏನೋ ಕೇಳುತ್ತಿರುವುದು, ಇದೆಲ್ಲಾ ನಮ್ಮನ್ನು ನಗೆಪಾಟಲಿಗೀಡು ಮಾಡುತ್ತಿದೆ. ಯಾವುದೇ ಪಕ್ಷದ ಶಾಸಕರನ್ನಾಗಲಿ ಅವರನ್ನು ಕಾರ್ಟೂನ್ ರೀತಿಯಲ್ಲಿ ತೋರಿಸಬಾರದು. ಇದಕ್ಕೆ ಒಂದು ಕಾನೂನನ್ನು

ಜಾರಿಗೊಳಿಸಬೇಕೆಂದು ಕೇಳಿ ಕೊಳ್ಳುತ್ತಾ ಇದಕ್ಕೆ ನಿರ್ಬಂಧ ಮಾಡಬೇಕೆಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಇಂದು ನಾವು ಮಾಧ್ಯಮಗಳ ಸಂಪರ್ಕವಿಲ್ಲದೆ, ಜನಪ್ರತಿನಿಧಿಗಳಾಗಿ ಹೊರ ಹೊಮ್ಮುವುದಕ್ಕೆ ಸಾಧ್ಯವಿಲ್ಲ. ಆದರೆ ಕೆಲವೊಂದು ಪತ್ರಿಕೆಗಳು. ನಾಯಕೊಡೆಗಳು ಹುಟ್ಟುವ ರೀತಿಯಲ್ಲಿ ಹುಟ್ಟಿಕೊಂಡಿವೆ. India Government ಗೆ ಹೋಗಿ ಬಂದು ರಿಜಿಸ್ಟ್ರೇಷನ್ ಕಾಪಿಯನ್ನು ತೆಗೆದುಕೊಂಡು ಬರುತ್ತಾರೆ. ದುಡ್ಡು, ಬ್ಲಾಕ್‌ಮೇಲ್ ಮಾಡುವುದಕ್ಕಾಗಿ ಈ ರೀತಿ ಮಾಡುತ್ತಾರೆ. ನನ್ನ ಬಗ್ಗೆಯೂ ಸಹ ಬೆಂದಕಾಳೂರ್ ಎನ್ನುವ ಪತ್ರಿಕೆಯಲ್ಲಿ 'ಹಲಕಟ್ ರಾಜಕಾರಣಿ' ಹೀಗೆ ಯಾವ ಪದಗಳು dictionary ಯಲ್ಲಿ ಇಲ್ಲವೋ ಅಂತಹ ಪದಗಳೆಲ್ಲವನ್ನು ಬರೆದಂತಹ ಪುಣ್ಯಾತ್ಮರು. ಅಂತಹ ಪತ್ರಿಕೆಗಳು ಎಲ್ಲಿ ಮಾರಾಟ ಮಾಡುತ್ತಾರೆಂದರೆ, ಯಾರ ಬಗ್ಗೆ ಬರೆಯುತ್ತಾರೆಯೋ, ಅವರು ಒಂದು ಮೊಬೈಲ್ ವ್ಯಾನ್ ಮಾಡಿಕೊಂಡು ಆ ವ್ಯಾನ್‌ನಲ್ಲಿ ತೆಗೆದುಕೊಂಡು ಬಂದು, ಯಾರಿಗೂ ದುಡ್ಡಿಗೆ ಮಾರಾಟ ಮಾಡುವುದಿಲ್ಲ. ಎಲ್ಲಾ ಕಛೇರಿಗಳಿಗೂ ಉಚಿತವಾಗಿ ಕೊಡುತ್ತಾರೆ. ಬೆಳಿಗ್ಗೆ 10.30 ಗಂಟೆಗೆ ರೆಡಿಯಿರುತ್ತದೆ. ಬೆಳಿಗ್ಗೆ ವರದಿ ನೋಡಿದ ಕೂಡಲೇ ನಿಮ್ಮ ಮೇಲೆ ಏಕೆ ಈ ರೀತಿ ಬರೆದಿದ್ದಾರೆ. ಯಾವ ಪತ್ರಿಕೆಯದು ಎಂದು ದೂರವಾಣಿ ಕರೆ ಮಾಡುತ್ತಾರೆ. ಆ ರೀತಿ ಕೇಳಿದಾಗ ನನಗೆ ಆ ಪತ್ರಿಕೆ ಬಗ್ಗೆ ಏನೂ ಗೊತ್ತಿರುವುದಿಲ್ಲ. ಅದಕ್ಕೆ ವರದಿಗಾರರಾಗಿ ಯಾರನ್ನೂ ನೇಮಕ ಮಾಡಿಕೊಳ್ಳುತ್ತಾರೆಂದರೆ ಊರಿನಲ್ಲಿ ಲಂಗು-ಲಗಾಮಿಲ್ಲದೆ, ಮೂರು ಬಿಟ್ಟಿರುವವರನ್ನು ಹೊಡದೆರೆ ಅವರಿಗೆ ಹೊಡೆಯಲಿ ಎನ್ನುವ ದೃಷ್ಟಿಯಲ್ಲಿ ನೇಮಕ ಮಾಡಿಕೊಳ್ಳುತ್ತಾರೆ. ಅವರಿಗೆ ಹೊಡೆದು ಬೇರೆ ನಾವೇ ಪಾಪ ಕಟ್ಟಿಕೊಳ್ಳಬೇಕು, ಮತ್ತೆ ಕೇಸ್ ಬೇರೆ ಹಾಕಿಸಿಕೊಳ್ಳಬೇಕಾಗುತ್ತದೆ. ಈ ರೀತಿ ಹಲವಾರು ಪತ್ರಿಕೆಗಳು ಲಂಗು-ಲಗಾಮು ಇಲ್ಲದೆ ಕಾರ್ಯ ನಿರ್ವಹಿಸುತ್ತಿದೆ. ಇಲ್ಲಿ ಕುಳಿತಿರುವವರೆಲ್ಲರನ್ನು ನಿಮಗೂ ಅವರಿಗೂ ಏನು ಸಂಬಂಧ ಎಂದು ವಿಚಾರಿಸಿದಾಗ, ಅವರನ್ನು ಇಲ್ಲಿ ಕುಳಿತುಕೊಳ್ಳವುದಕ್ಕೆ ಬಿಡುವುದಿಲ್ಲ. ಅವರೆಲ್ಲ ಲಂಗು-ಲಗಾಮಿಲ್ಲದೆ ಹೊಟ್ಟೆ ಪಾಡಿಗಾಗಿ ಜೀವನ ಮಾಡುವವರು ಎಂದು ಹೇಳಿದರು. ಈ ಬಗ್ಗೆ

ಗೊತ್ತಾಗಿದೆ ನಾವು ತಿಳಿದುಕೊಂಡಿದ್ದೇನೆ. ಆದ್ದರಿಂದ ನೀವು ದಯಮಾಡಿ ಅಂತಹ ಪತ್ರಿಕೆಗಳನ್ನು ಕಂಟ್ರೋಲ್ ಮಾಡಿ ಅವರ ಮೇಲೆ ನಿರ್ಬಂಧವನ್ನು ಹೇರುವಂತೆ ಮಾಡಿ. ಪತ್ರಿಕಾ ಸ್ವಾತಂತ್ರ್ಯವಿದೆಯೆಂದು ಇನ್ನೊಬ್ಬರ ಸ್ವಾತಂತ್ರ್ಯವನ್ನು ಹರಣ ಮಾಡುವುದು ಒಳ್ಳೆಯದಲ್ಲ. ಆದಕಾರಣ, ಅಧ್ಯಕ್ಷರಾದ ನೀವು ಅಂತಹ ಪತ್ರಿಕೆಗಳಿಗೆ ಕಡಿವಾಣ ಹಾಕಿ. ಜನಪ್ರತಿನಿಧಿಗಳಾದ ನಾನು ತಪ್ಪು ಮಾಡಿದರೆ ನಮ್ಮನ್ನು ನೇಣು ಹಾಕಿ, ಬೇಡವೆನ್ನುವುದಿಲ್ಲ. ನಾವುಗಳು ತಪ್ಪು ಮಾಡಿದರೆ ಪತ್ರಿಕೆಗಳಲ್ಲಿ ಬರೆಯುತ್ತಾರೆ. ಇಲ್ಲವೆಂದು ಹೇಳುವುದಿಲ್ಲ. ಬರೆಯಬೇಕು. ಅದು ಪ್ರಜಾಪ್ರಭುತ್ವ ಪತ್ರಿಕಾ ಸ್ವಾತಂತ್ರ್ಯ ಅದರೆ ನಾವೇನೂ ತಪ್ಪು ಮಾಡದೆ ದುಡ್ಡು ಕಿತ್ತುಕೊಳ್ಳವುದಕ್ಕೋಸ್ಕರ, ಯಾರೋ ವೈರಿಯನ್ನು ಮೇಲೆಕ್ಕೆತ್ತುವ ಸಲುವಾಗಿ, ಕಾಲಹರಣ ಮಾಡಿ ಬರೆಯುವಂತಹದ್ದು ಶುದ್ಧ ತಪ್ಪು India Government ನಲ್ಲಿ ಸರ್ಟಿಫಿಕೇಟ್ ಕೊಡುವುದರಿಂದ ಈ ಬಗ್ಗೆ ಅಲ್ಲಿಗೆ ನೀವು ಮಾಹಿತಿಯನ್ನು ಕಳುಹಿಸಕೊಡಬೇಕು. ಈ ರೀತಿಯಲ್ಲಿ ಬರೆಯುವಂತಹವರಿಗೆ ಸರ್ಟಿಫಿಕೇಟ್ ಕೊಡಬಾರದು, ಪತ್ರಿಕೆ ನಡೆಸುವವರಿಗೆ ಕೆಲವೊಂದು ನಿಬಂಧನೆಗಳನ್ನು ಜಾರಿಗೆ ತರಬೇಕು. ಏಕೆಂದರೆ ಇವರು ಒಂದು ಪ್ರಿಂಟಿಂಗ್ ಪ್ರೆಸ್ ಇಟ್ಟುಕೊಂಡಿರುತ್ತಾರೆ. ವಾರಪೂರ್ತಿ ಯಾರ ಬಗ್ಗೆ ಮಾಹಿತಿ ಸಂಗ್ರಹಿಸಿರುತ್ತಾರೋ ಅದೆಲ್ಲಾವನ್ನು ಆ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಮಾಡಿಸಿಕೊಂಡು ಬರುತ್ತಾರೆ. ಆದರೆ ಅಧು ಪತ್ರಿಕೆಯನ್ನು ಪ್ರಿಂಟ್ ಮಾಡುವ ಪ್ರಿಂಟಿಂಗ್ ಪ್ರೆಸ್ ಅಲ್ಲ. ನಿಬಂಧನೆಗಳನ್ನು ಹಾಕಿದರೆ ಅಂತಹವರೆಲ್ಲರೂ ಕೊಚ್ಚಿಕೊಂಡು ಹೋಗುತ್ತಾರೆ. ಪತ್ರಿಕೆ ನಡೆಸಬೇಕಾದರೆ ಏನೇನು ನಿಬಂಧನೆಗಳು ಬೇಕು ಎನ್ನುವುದನ್ನು ಕಾನೂನಿನ ಚೌಕಟ್ಟಿನಲ್ಲಿ ತರಬೇಕು. ಬ್ಲಾಕ್‌ಮೇಲ್‌ಗಾಗಿ ಸೃಷ್ಠಿ ಮಾಡಿರುವ ಪತ್ರಿಕೆಗಳನ್ನು ನಿಲ್ಲಿಸುವಂತಹದು. ಅಭಯ್ ಪಾಟೀಲ್ ಅವರ ಪ್ರಕರಣದಲ್ಲಿ ಸಿಕ್ಕಿಹಾಕಿಕೊಂಡಿದ್ದಾರಲ್ಲಾ. ಇಂತಹವರ ಮೇಲೆ ಬರೆ ಎಳೆಯಬೇಕು. ಯಾರಾದರೂ 2–3 ವರ್ಷಗಳ ಕಾಲ ಜೈಲಿಗೆ ಹೋಗಿ ಬಂದರೆ ಈ ರೀತಿ ಬರೆಯುವುದನ್ನು ಕೈ ಬಿಡುತ್ತಾರೆ. ಇನ್ನು ಮುಂದೆ ಯಾರ ಮೇಲೂ ಬರೆಯುವುದು ಬೇಡ. ಏಕೆಂದರೆ ಎಂ.ಎಲ್.ಎ.ಗಳು ಜೈಲಿಗೆ ಕಳುಹಿಸುತ್ತಾರೆ ಎನ್ನುವ ಭಾವನೆ ಅದರಲ್ಲಿ

ಬರುತ್ತದೆ. ದಯಮಾಡಿ ಲಂಗು-ಲಗಾಮಿಲ್ಲದ ಪತ್ರಿಕೆಯವರ ಮೇಲೆ ಕಡಿವಾಣ ಹಾಕಿ, ಜನಪ್ರತಿನಿಧಿಗಳಿಗೆ ಸಹಾಯ ಮಾಡಿ. ಇನ್ನು ಮುಂದೆ ಈ ರೀತಿ ಆಗಬಾರದು. TV ಮಾಧ್ಯಮದವರ ಬಗ್ಗೆ ಏನೂ ಮಾತನಾಡುವುದಿಲ್ಲ. ಆದರೆ, ನಮ್ಮಲ್ಲಿ ಒಬ್ಬರು ಟಿ.ವಿ. ಮಾಧ್ಯಮದವರಿದ್ದು, ಅವರು ಉದಯ ಟಿ.ವಿ.ಯಲ್ಲಿದ್ದಾರೆ. ಅವರು ನಾವು ಮಾಡಿರುವ ಒಳ್ಳೆಯ ಕೆಲಸಗಳನ್ನು ಹಾಕುವುದಿಲ್ಲ. ಸ್ವಲ್ಪ ಎಡವಟ್ಟಾಗಿದ್ದರೆ ಹೆಡ್‌ಲೈನ್‌ನಲ್ಲಿಯೇ ಹಾಕುತ್ತಾರೆ. ಶಿವಲಿಂಗೇಗೌಡರಿಂದ ಸಂಘರ್ಷ. ಅದು ಇದು ಎಂದು ಹಾಕುತ್ತಾರೆ. ಆದರೆ ಅಲ್ಲಿ ಏನೂ ನಡೆದಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎನ್. ಯೋಗೀಶ್ ಭಟ್‌ರವರು ಸಭಾಧ್ಯಕ್ಷರ ಪೀಠವನ್ನು ಆಲಂಕರಿಸಿದರು)

ಇಂತಹ ವರದಿಗಾರರು ಕೆಲವು ಮಂದಿ ಇದ್ದಾರೆ. ನಾವು ಮಾಧ್ಯಮದವರನ್ನು ಟಿ.ವಿ.ಯವರನ್ನು ದೂರುವುದಿಲ್ಲ. ನಾವು ದೂರುವಂತಹದು ಅಲ್ಲಿ ಅವರು ಕೆಲವೊಂದು ಗಿಮಿಕ್ಸ್ ಮಾಡುತ್ತಿರುತ್ತಾರೆ. ಅದರ ಬಗ್ಗೆ ಹೇಳುತ್ತಿದ್ದೇವೆ. ಇದನ್ನು ಟಿ.ವಿ. ನಡೆಸುವಂತಹ ಮಾಲೀಕರು ಕಂಟ್ರೋಲ್ ಮಾಡಿದರೆ ಸಾಕು. ಹತ್ತಾರು ಪತ್ರಿಕೆಗಳಿಗೆ ಹೆಸರೇ ಇಲ್ಲ. ಹಾಯ್ ಬೆಂಗಳೂರು, ಹಾಯ್ ಬೆಂದಕಾಳೂರ್, ಸರಿಯಾಗಿ ಹೆಸರಿಲ್ಲದೇ ನಿಜವಾಗಿಯೂ ಮಾನ್ಯ ಶಾಸಕರುಗಳಿಗೆ ಅಗೌರವ ಉಂಟುಮಾಡುತ್ತಿದ್ದಾರೆ. ಗೌರವ ಕಳೆಯುತ್ತಿದ್ದಾರೆ, ದಯಮಾಡಿ ಬ್ಲ್ಯಾಕ್‌ಮೇಲ್ ಮಾಡುವಂತಹ ಪತ್ರಿಕೆಗಳನ್ನೆಲ್ಲಾ ನಿಲ್ಲಿಸುವುದು ಒಳ್ಳೆಯದೆಂದು ಈ ಸಂದರ್ಭದಲ್ಲಿ ಮನವಿ ಮಾಡುತ್ತೇನೆ.

ಶ್ರೀ ಶೈಲಪ್ಪ ವಿರೂಪಾಕ್ಷಪ್ಪ ಬಿದರೂರ್ : ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಹಕ್ಕು ಭಾದ್ಯತಾ ಸಮಿತಿಯವರು ವರದಿಯನ್ನು ಏನು ಮಂಡಿಸಿದ್ದಾರೆ. ಸದನದ ಸದಸ್ಯರಾಗಿರುವಂತಹ ಶ್ರೀ ಅಭಯ್ ಪಾಟೀಲ್ ಹಾಗೂ ಶ್ರೀ ಶ್ಯಾಮ್ ಭೀಮ್ ಘಾಟಗೆ ಅವರುಗಳಮೇಲೆ ಪತ್ರಿಕೆಯವರು ನಡೆದುಕೊಂಡು ರೀತಿ, ಅವರ ಹಕ್ಕಿಗೆ ಚ್ಯುತಿಯಾಗಿದೆಯೆಂದು ಹೇಳುವ ಬಗ್ಗೆ ಬಹಳ ಸವಿಸ್ತಾರವಾದ ವರದಿಯನು ಕೊಟ್ಟಿದ್ದಾರೆ. ಈ ಹಕ್ಕುಭಾಧ್ಯತಾ ಸಮಿತಿಗೆ ಅತ್ಯಂತ ಅಗೌರವ ತೋರುವಂತಹ ರೀತಿಯಲ್ಲಿ ತರುಣ್ ಭಾರತ್

ಪತ್ರಿಕೆ ಸಂಪಾದಕರನ್ನು ಹಿಡಿದುಕೊಂಡಿದ್ದಾರೆ. ತಾವು ನೇಮಕ ಮಾಡಿರುವಂತಹ ಸದನ ಸಮಿತಿಗೆ ಅಗೌರವನ್ನು ಉಂಟು ಮಾಡಿರುವಂತಹ ಆ ಸಂಪಾದಕರ ಮೇಲೆ ಅತ್ಯಂತ ಕಠಿಣವಾದಂತಹ ಕ್ರಮಕೈಗೊಳ್ಳುವುದು ಅವಶ್ಯಕತೆಯಿದೆ. ಗಡಿ ಭಾಗದಲ್ಲಿ ವಿಶೇಷವಾಗಿ ಬೆಳಗಾವಿ ಜಿಲ್ಲೆಯಲ್ಲಿ ಅಲ್ಲಿಯ ಜನರ ಭಾವನೆಗಳನ್ನು ಕೆರಳಿಸತಕ್ಕಂಥ ಕನ್ನಡಿಗರಿಗೆ ಅನ್ಯಾಯ ಮಾಡುವಂತಹ, ಇನ್ನುಳಿದ ಜನಾಂಗವನ್ನು ಪ್ರಚೋದಿಸುವಂತಹ, ಭಾವನಾತ್ಮಕ ಸಂಬಂಧಗಳನ್ನು ಕೆಣಕುವಂತಹ ಮತ್ತು ಇಡೀ ಕನ್ನಡಿಗರಿಗೆ ಅವಮಾನ ಮಾಡುವಂತಹ ರೀತಿಯಲ್ಲಿ ಈ ಪತ್ರಿಕೆಯ ಸಂಪಾದಕರು ಮಾಡುತ್ತಿದ್ದಾರೆ. ನಿರಂತರವಾಗಿ ಆ ಪತ್ರಿಕೆಯನ್ನು ಅವಲೋಕನ ಮಾಡಬೇಕು. ಈ ರೀತಿ ಭಾವನೆಗಳನ್ನು ಕೆರಳಿಸುವಂಥ ನಿಟ್ಟಿನಲ್ಲಿ ಇಡೀ ವ್ಯವಸ್ಥೆಯನ್ನು ಅಲ್ಲಿರತಕ್ಕಂಥ ಆಡಳಿತ ಯಂತ್ರಕ್ಕೂ ತೊಂದರೆಯನ್ನು ಉಂಟು ಮಾಡತಕ್ಕ ರೀತಿಯಲ್ಲಿ ಈ ಸಂಪಾದಕರು ಕಾರ್ಯನಿರ್ವಹಿಸುತ್ತಿರತಕ್ಕಂಥದ್ದನ್ನು ಇಡೀ ಸದನ ಒಂದಾಗಿ ಅವರಿಗೆ ಅತ್ಯಂತ ಕಠಿಣಕರವಾದ ಶಿಕ್ಷೆಯನು ಕೊಡಲಿಕ್ಕೆ ಇಡೀ ಸದನ ಒಕ್ಕೊರಲಿನಿಂದ ಈ ಬೇಡಿಕೆಗೆ ಈ ಹಕ್ಕುಭಾದ್ಯತೆ ಸಮಿತಿಯ ವರದಿ ಆಧಾರದ ಮೇಲೆ ಕ್ರಮ ಕೈಗೊಳ್ಳಬೇಕಾದಂಥ ಅವಶ್ಯಕತೆ ಇದೆ. ಕಾನೂನು ರೀತಿಯಲ್ಲಿ ಅವರಿಗೆ ಏನು ಶಿಕ್ಷೆ ಕೊಡುವುದಕ್ಕೆ ಸಾಧ್ಯ ಇದೆ ಆ ರೀತಿಯಾದಂಥ ಶಿಕ್ಷೆಗೆ ಗುರಿಪಡಿಸಬೇಕೆಂದು ಮಾನ್ಯ ಸಭಾಧ್ಯಕ್ಷರಿಗೆ ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಸಿ.ಎಸ್. ಪುಟ್ಟೇಗೌಡರವರೆ ಮಾತನಾಡಿ.

ಶ್ರೀ ಸಿ.ಎಸ್. ಪುಟ್ಟೇಗೌಡ : ಮಾನ್ಯ ಸಭಾಧ್ಯಕ್ಷರೆ, ನಾನು ಈ ಸಮಿತಿಯಲ್ಲಿ ಸದಸ್ಯನಾಗಿದ್ದು ಕೆಲಸ ಮಾಡಿರುತ್ತೇನೆ. ಒಮ್ಮೆ ಮಾತ್ರ ತರುಣ್ ಭಾರತ್ ಪತ್ರಿಕೆಯವರು ಕರೆದಿದ್ದಕ್ಕೆ ಬಂದಿದ್ದರು. ಅವರನ್ನು ಕಮಿಟಿ ಮುಂದೆ ಕರೆಸುವುದಕ್ಕೆ ಬಹಳ ಕಷ್ಟವಾಯಿತು. ನಮ್ಮ ಸಮಿತಿಯಲ್ಲಿ ನಮಗೆ ಒಂದು ರೀತಿ ಬೇರೆ ಬೇರೆ ತರಹದ ದಿಕ್ಕನ್ನು ತಿರುಗಿಸುವಂಥ ಸನ್ನಿವೇಶ ಕೂಡ ಇತ್ತು. ಡಾಕ್ಟರ್ ಸಹ ಬಂದು "ನಮಗೆ ಗೊತ್ತಿಲ್ಲ ಸಾರ್, ನಮ್ಮನ್ನು ಬ್ಲ್ಯಾಕ್‌ಮೇಲ್ ಮಾಡಿ ಸುಳ್ಳು ಸರ್ಟಿಫಿಕೇಟ್ ತಂದಿದ್ದಾರೆ" ಎಂದು

ನೇರವಾಗಿ ಹೇಳಿದರು. ಪತ್ರಿಕೆ ಎಂದ ತಕ್ಷಣ ಇದು ದೇಶದ ನಾಲ್ಕನೇ ಅಂಗವೆಂದು ತಿಳಿದಿರುವವರು ನಾವು. ಮೊನ್ನೆ ನಮ್ಮ ಊರಿನಲ್ಲಿ ಪತ್ರಿಕಾ ದಿನಾಚರಣೆ ಮಾಡಿದರು. ಹಾಸನ ಜಿಲ್ಲೆಯ ಎಲ್ಲಾ ಮಾಧ್ಯಮದವರು ಬಂದಿದ್ದರು. ಅವರು ಸಾರ್ ನಮ್ಮ ಮಾಧ್ಯಮದವರ ಜೀವನ ಪೊಲೀಸ್‌ನವರು ಅಥವಾ ಮಿಲಿಟರಿಯವರು ಒದ್ದಾಡುವ ರೀತಿಯಲ್ಲಿ ನಾವು ಜೀವ ತೆತ್ತು. ಇಂಥದನ್ನೆಲ್ಲ ರಿಪೋರ್ಟ್ ಮಾಡುವಾಗ. ನಮ್ಮ ಜೀವನ ಕೂಡ ಅಷ್ಟು ಚೆನ್ನಾಗಿಲ್ಲ. ನಮ್ಮ ಬಗ್ಗೆ ಶಾಸನ ಸಭೆಯಲ್ಲಿ ಮಾತನಾಡುವುದಿಲ್ಲ. ಕಾಳಜಿ ತೋರಿಸುವುದಿಲ್ಲ. ಸನ್ನಿವೇಶ ಸಿಕ್ಕಿದಾಗ ನೀವಾದರೂ ಮಾತನಾಡಬೇಕು ಎನ್ನುವ ಮಾತನ್ನು ಕೂಡ ಹೇಳಿದ್ದರು. ಪತ್ರಿಕಾ ಮಾಧ್ಯಮದಲ್ಲಿ ಕೆಲಸ ಮಾಡುವವರು ಬಹಳ ಕೆಟ್ಟ ಪರಿಸ್ಥಿತಿಯಲ್ಲಿದ್ದು, ಕಷ್ಟಕ್ಕೆ ಸಿಕ್ಕಿಕೊಂಡಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿರುವಂಥವರಿಗೆ ಕೊಡುವಂಥ ಆರ್ಥಿಕ ಶಕ್ತಿ ಅವರಿಗೆ ತಲುಪದಂತಹ ಪರಿಸ್ಥಿತಿ ಇದೆ. ಒಂದು ಕಡೆ ಏನಾಗುತ್ತಿದೆ ಎಂದರೆ ಅವರು ಮಾಧ್ಯಮದವರೋ ಗೊತ್ತಿಲ್ಲ. ಯಾವುದೋ ಪೇಪರಗಳನ್ನು ಪ್ರಿಂಟ್ ಮಾಡಿಸಿಕೊಂಡು LH ಗೆ ಬಂದು ಬಿಡುತ್ತಾರೆ. ಇದನ್ನು ಕೊಡದೇ ಹೋದರೆ ನಾಳೆ ಮುಖಪುಟದಲ್ಲಿ ಬಂದುಬಿಡುತ್ತದೆ. ನಮ್ಮ ಮರ್ಯಾದೆ ಕಳೆಯುತ್ತಾರೆಂದು ನಮ್ಮವರು ಅಲ್ಲಲ್ಲಿ ಇರುವ ಪುಣ್ಯಾತ್ಮರು ಭಕ್ಷೀಸು ಕೊಟ್ಟು. ಅಂಥವರು ಜಾಸ್ತಿಯಾಗಿದ್ದಾರೆ. ಅವರದೇ ಒಂದು ವೃತ್ತಿ ಅವರು ಯಾವ ಪ್ರೆಸ್, ಅದಕ್ಕೆ ಒಪ್ಪಿಗೆ ಇದೆಯೋ ಇಲ್ಲವೋ ಗೊತ್ತಿಲ್ಲ. ಎರಡೂ ಇದೆ. ಒಂದು ಕಡೆ ಈ ರಾಜ್ಯದಲ್ಲಿ ಪತ್ರಿಕಾ ಮಾಧ್ಯಮದವರು ಪಾಪ ನಿಜವಾಗಿ ಮಾಧ್ಯಮವನ್ನು ನಡೆಸಿ ಜೀವ ತೆತ್ತಿರುವ ಘಟನೆಗಳು ಇದೆ. ನ್ಯಾಯವನ್ನು ಎತ್ತಿ ಹಿಡಿಯುವುದಕ್ಕೆ ಹೋಗಿ, ಸತ್ಯವನ್ನು ಸಮರ್ಥನೆ ಮಾಡುವುದಕ್ಕೆ ಹೋಗಿ ಪ್ರಾಣ ಕಳೆದುಕೊಂಡಂಥ ಪತ್ರಿಕಾ ಮಾಧ್ಯಮದ ಸ್ನೇಹಿತರ ಬಗ್ಗೆ ಕೇಳಿದ್ದೇವೆ. ಈ ರೀತಿ ಬ್ಲ್ಯಾಕ್‌ಮೇಲ್ ಮಾಡತಕ್ಕಂಥದ್ದು, ಎದುರಿಸುವುದು, ಮಾಹಿತಿ ಹಕ್ಕಿನಲ್ಲಿ ಕೆಲವರು ಆ ಪುಣ್ಯಾತ್ಮರು ಎಲ್ಲಾ ಕಡೆ ಶುರು ಆಗಿಬಿಟ್ಟಿದ್ದಾರೆ. ಇವತ್ತು ಉದ್ಯೋಗನೇ ಬೇಡ, ಬಿಟ್ಟು ಹೋಗಿಬಿಡಬೇಕೆಂಬ ಪರಿಸ್ಥಿತಿ ಬಂದಿದೆ. ಅದು ಒಂದು ಕಡೆ ಒಳ್ಳೆಯದಾಗಿದೆ. ಇನ್ನೊಂದು ಕಡೆ

ಮಾಹಿತಿ ಹಕ್ಕನ್ನು ತೆಗೆದುಕೊಳ್ಳುವುದು, ನೀನು ಇಷ್ಟು ಕೊಟ್ಟರೆ ನಿಮಗೆ ನಾಳೆ ವಾಪಸ್ಸು ಬರೆದುಕೊಡುತ್ತೇವೆಂದು ಹೇಳುತ್ತಾರೆ. ಬರೆದುಕೊಟ್ಟಿರುವ ಘಟನೆ ಇದೆ. ಒಂದು ಕಡೆ ಮಾಹಿತಿ ಹಕ್ಕಿಗೆ ಕೊಡುವುದು, ಆಮೇಲೆ ದುಡ್ಡು ಕೊಟ್ಟ ನಂತರ, ಇಲ್ಲ ಅದು ಕಣ್ಣು ತಪ್ಪಿ ಮಾಡಿರುವುದು, ಕೈ ತಪ್ಪಿ ಮಾಡಿರುವುದೆಂದು ಬರೆದುಕೊಡುತ್ತಾರೆ. ಈ ರೀತಿಯ ಕೆಟ್ಟ ಸನ್ನಿವೇಶ ಇದೆ. ಇವತ್ತು ಒಳ್ಳೆಯ ಉದ್ದೇಶದಿಂದಲೇ ಮಾಧ್ಯಮ ಹಾಗೂ ಮಾಹಿತಿ ಹಕ್ಕು ಕೆಲಸ ಮಾಡುತ್ತವೆ. ಇನ್ನೊಂದು ಕಡೆ ನಮ್ಮ ಎದುರಾಳಿ ನಾಯಕರನ್ನು, ಬೇರೆ ಪಾರ್ಟಿನವರನ್ನು ಎದುರಿಸಬಹುದು. ಆದರೆ ಇಡೀ ರಾಜ್ಯಾದ್ಯಂತ bad elements ಇದ್ದಾರಲ್ಲ ಇವರನ್ನು ನಾವು ಎದುರು ಹಾಕಿಕೊಂಡು ನಮ್ಮ ಕಾರ್ಯವನ್ನು ಮಾಡುವಾಗ ಬಹಳ ಜಿಗುಪ್ಸೆಯಾಗಿದೆ. ಮೊನ್ನೆ ನಮ್ಮ ಊರಿನ ಇಡೀ ಮಾಧ್ಯಮದವರು 'ನಾವು ಬಹಳ ಕಷ್ಟದಲ್ಲಿದ್ದೇವೆ, ಮಾನ್ಯ ಪುಟ್ಟೇಗೌಡರವರೆ, ನಾವು ರಿಪೋರ್ಟ್ ಮಾಡಬೇಕಾದರೆ ನಮ್ಮ ಪ್ರಾಣ ಹೋಗುವ ಸ್ಥಿತಿ ಇದೆ ಎಂದು ಗೊತ್ತಿದ್ದರೂ ಸಹ ನಾವು ಅಲ್ಲಿ ಹೋಗಿ ರಿಪೋರ್ಟ್ ಮಾಡಬೇಕು, ಆಮೇಲೆ ನಾವು ತೊಂದರೆಗೆ ಸಿಕ್ಕಿಹಾಕಿಕೊಳ್ಳುತ್ತೇವೆ, ನಮಗೆ ಬರತಕ್ಕಂಥ ಸಂಭಾವನೆ ಕೂಡ ಬಹಳ ಕಡಿಮೆ. ಎಷ್ಟೋ ಜನ ಮನೆ ಇಲ್ಲದ ಜೀವ ತೆತ್ತಂಥ ಮಾಧ್ಯಮದವರು ಇದ್ದಾರೆ " ಎಂದು ಹೇಳಿದರು. ಅವರ ಒಂದು ಕಡೆ ಸಂಕಷ್ಟಕ್ಕೂ ಈ ಸರ್ಕಾರ ನೆರವಿಗೆ ಬರಬೇಕು. ಇನ್ನೊಂದು ಕಡೆ ಇಂಥ ಫೋರ್ಜರಿ ಪತ್ರಿಕೆ ತೋರಿಸಿಕೊಂಡು ಬ್ಲ್ಯಾಕ್‌ಮೇಲ್ ಮಾಡುತ್ತಾರಲ್ಲ ಇಂಥವರಿಗೆ, ನಮ್ಮ ಸ್ನೇಹಿತರು ಹೇಳಿದ ಹಾಗೆ ಶಿಕ್ಷೆ ಆಗದೆ ಇದ್ದರೆ. ಇವರು ಬಾಲಂಗೋಚಿಗಳ ತರಹ ಸಣ್ಣಪುಟ್ಟದ್ದನ್ನು ಹಿಡಿದುಕೊಂಡು ಬ್ಲ್ಯಾಕ್‌ಮೇಲ್ ಮಾಡಿ ನಮ್ಮನ್ನು ಶಾಸಕರ ಭವನದಲ್ಲಿ ಕುಳಿತುಕೊಳ್ಳುವುದಕ್ಕೆ ಬಿಡುವುದಿಲ್ಲ. ಆದ್ದರಿಂದ ಇದನ್ನು ಹತ್ತಿಕ್ಕಬೇಕೆಂಬ ಮಾತನ್ನು ಹೇಳುತ್ತೇನೆ. ಮಾಹಿತಿ ಹಕ್ಕಿನ ಬಗ್ಗೆ ಹೇಳಿದ್ದೇನಲ್ಲಾ ಅದು ಕೂಡ ಏನಾಗಿದೆ ಎಂದರೆ ಇಡೀ ರಾಜ್ಯದಲ್ಲಿ ಕೆಲವು ಮರ್ಯಾದಸ್ಥ ಇಂಜನೀಯರುಗಳು ಕೆಲಸ ಮಾಡುವುದಕ್ಕೆ ಬಿಡುವುದಿಲ್ಲ. ಯಾರೋ ದಂಧೆ ಮಾಡುವಂಥ ಇಂಜಿನೀಯರುಗಳನ್ನು ಫೋರ್ಜರಿ ಪತ್ರಿಕೆಗಳವರನ್ನು ಸರಿಮಾಡಿಕೊಂಡಿರುತ್ತಾರೆ. ಮರ್ಯಾದಸ್ಥನಿಗೆ

ಏನಾಗುತ್ತದೆಂದರೆ ಇದು ಒಂದು ರೀತಿಯಲ್ಲಿ humiliation ಇಂತಹುವುಗಳನ್ನು ಹತ್ತಿಕ್ಕುವುದಕ್ಕೆ ಸರ್ಕಾರ ಗಂಭೀರವಾಗಿ ಚರ್ಚೆ ಮಾಡಿ. ಇದರ ಬಗ್ಗೆ ಗಮನ ಹರಿಸಿ ಇಂಥ ಕೆಟ್ಟ ಸನ್ನಿವೇಶವನ್ನು, ಅಹಿತಕರ ವಾತಾವರಣವನ್ನು ತಪ್ಪಿಸಬೇಕೆಂದು ಹೇಳುವುದರ ಜೊತೆಗೆ, ಕಷ್ಟದಲ್ಲಿರತಕ್ಕಂಥವರು, ನ್ಯಾಯಬದ್ಧವಾಗಿ ರಿಪೋರ್ಟ್ ಮಾಡತಕ್ಕಂಥ, ಆರ್ಥಿಕ ದುಸ್ಥಿತಿಯಲ್ಲಿ ಏನು ಪತ್ರಿಕಾ ಸ್ನೇಹಿತರು ಇದ್ದಾರೆ ಆವರ ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಣೆ ಮಾಡುವುದಕ್ಕೆ ಸಹಾಯ ಮಾಡಿ ಎಂದು ಎರಡು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಎಂ.ಬಿ. ಪಾಟೀಲ್‌ರವರೆ, ಮಾತನಾಡಿ.

ಶ್ರೀ ಎಂ.ಬಿ. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಇವತ್ತು ನಾನು ತಮ್ಮ ಮುಖಾಂತರ ಈ ಸದನಕ್ಕೆ ಒತ್ತಾಯ ಮಾಡುತ್ತೇನೆ. ತರುಣ್ ಭಾರತ್ ಪತ್ರಿಕೆ ಏನಿದೆ, ಇದರ ಬಗ್ಗೆ ಈ ಸದನದಲ್ಲಿ ಒಂದು unanimous resolution pass ಮಾಡಬೇಕು. Freedom of expression ಮತ್ತು ಪ್ರಜಾಪ್ರಭುತ್ವದ ಹೆಸರಿನಲ್ಲಿ ಇವರ ವರದಿ ನೋಡಿದಾಗ, ಊರಿನ ಡಾಕ್ಟರ್ಸ್ ರಿಪೋರ್ಟ್ ಹಾಕಿ ಬಹಳಷ್ಟು ಗೊಂದಲವನ್ನು ಅಲ್ಲಿ create ಮಾಡಿದ್ದಾರೆ. Hospital ನಲ್ಲಿ admit ಆಗಿ ಸಭೆಗೆ ಹಾಜರಾಗಿಲ್ಲವೆನ್ನುವುದನ್ನು ನಾವು ನೋಡಿದ್ದೇನೆ. ಅದಕ್ಕೆ ನಾನು ಈ ಸದನಕ್ಕೆ ಒತ್ತಾಯ ಮಾಡುತ್ತೇನೆ. We should pass a unianimous resolution to ban this paper in Karnataka. That is No. 1 ಎರಡನೆಯದು ಎಲ್ಲಾ ರಂಗದಲ್ಲಿ ಕೆಟ್ಟವರು, ಒಳ್ಳೆಯವರು ಇದ್ದಾರೆ. ಇದರರ್ಥ ಎಲ್ಲಾ ಪತ್ರಿಕೆಗಳವರು, ಎಲ್ಲಾ ಚಾನೆಲ್‌ಗಳು ತಪ್ಪು ಬರೆಯುತ್ತವೆ, ಕೆಟ್ಟವಾಗಿದೆ ಎಂದಲ್ಲ. ಆದರೆ ಆತಿರೇಕಕ್ಕೆ ಹೋಗಿ, ಅಸಭ್ಯ ಪದಗಳನ್ನು ಬಳಸಿ, ಅಶ್ಲೀಲ ಪದಗಳನ್ನು ಬಳಸಿ ಇವತ್ತಿನ ದಿವಸ ಏನು ಈ ಮಾಧ್ಯಮಗಳು ದುರುಪಯೋಗ ಪಡಿಸಿಕೊಳ್ಳುತ್ತೇವೆ ಅದನ್ನು ತಾವು ದಯವಿಟ್ಟು ಕೆಲವೊಂದು restriction, guidelines issue ಮಾಡಬೇಕು not to use these words ಎಂದು ಸನ್ಮಾನ್ಯ ಸುರೇಶ್ ಕುಮಾರ್, Law Minister ರವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಸನ್ಮಾನ್ಯ ಸಭಾಧ್ಯಕ್ಷರೆ, ಇದರ ಜೊತೆ ಇನ್ನೊಂದು ಮಾಧ್ಯಮದವರು ಕೂಡ self-

restrictions ಹಾಕಿಕೊಳ್ಳಬೇಕಾಗುತ್ತದೆ. ನಾನು ಯಾವ ಮಾಧ್ಯಮದವರು ಎಂದು ಹೇಳುವುದಕ್ಕೆ ಬಯಸುವುದಿಲ್ಲ. ಕೆಲವೊಮ್ಮೆ ನಾವು ಮನೆಯಲ್ಲಿ ಕುಳಿತುಕೊಂಡು ಕೆಲವೊಂದು ಚಾನೆಲ್ಸ್‌ನ್ನು ನೋಡಿದಾಗ, ಇವತ್ತು ಬಹಳಷ್ಟು ಚಾನೆಲ್ಸ್‌ನಲ್ಲಿ popular ಆಗುತ್ತಿರುವುದು ಅನೈತಿಕ ವಿಷಯಗಳು. murder ಕೇಸುಗಳು ಇವನ್ನೆ ಹೈಲೈಟ್ ಮಾಡಿ ತೋರಿಸುವುದರಿಂದ, ಇದನ್ನು ಮನೆಯಲ್ಲಿ ಫ್ಯಾಮಿಲಿ ವೀಕ್ಷಿಸಬಹುದಾ? ಆ ಮಾಧ್ಯಮದನರು self-restrictions ಹಾಕಿಕೊಳ್ಳಬೇಕಾಗುತ್ತದೆ. ಬೇರೆ ಅನೇಕ ವಿಚಾರಗಳು ಇವೆ. ಒಳ್ಳೆಯ ಧಾರಾವಾಹಿಗಳನ್ನು ತೋರಿಸಿ, ಅದನ್ನು ಬಿಟ್ಟು ನಾವು ಇವತ್ತು ಬರೀ ಅನೈತಿಕ ಸಂಬಂಧಗಳ ಬಗ್ಗೆ, ಕೊಲೆಗಳ ಬಗ್ಗೆ, ಮೂಢನಂಬಿಕೆಗಳ ಬಗ್ಗೆ 24x7 ಚಾನೆಲ್‌ಗಳಲ್ಲಿ ತೋರಿಸದೆ ಒಳ್ಳೆಯ ಧಾರಾವಾಹಿಗಳನ್ನು ತಾವು ಬಿತ್ತರಿಸಿ, ಅನೇಕ ಹೆಸರಾಂತ ಸಾಹಿತಿಗಳು ಇದ್ದಾರೆ, ಅವರ ಕಥೆಗಳನ್ನು ಪ್ರಸಾರ ಮಾಡಿ. ಧಾರ್ಮಿಕ ಕಾರ್ಯಕ್ರಮಗಳಿವೆ, ಅದನ್ನು ಪ್ರಸಾರ ಮಾಡಿ, 24 ತಾಸು ಅದೇ focus ಮಾಡಿ ಇಲ್ಲದಿದ್ದರೆ ಆ ಚಾನೆಲ್‌ಗಳನ್ನು ಮನೆಯಲ್ಲಿ family ಯಾರೂ ಕೂಡ ನೋಡುವುದಕ್ಕೆ ಆಗುವುದಿಲ್ಲ. ಸನ್ಮಾನ್ಯ ಅಧ್ಯಕ್ಷರೆ, ಹಿಂದೆ ನಾವು yellow journalism ಎನ್ನುತ್ತಿದ್ದೆವು. ಆದರೆ ಇವತ್ತು yellow journalism ಕನ್ವರ್ಟ್ ಆಗಿ blue journalismವರೆಗೂ ಹೋಗಿದೆ. ಬಹಳಷ್ಟು condemn ಮಾಡಿ, ಕಾರ್ಟೂನ್ ಮುಖಾಂತರ, ಇನ್ನಿತರಗಳ ಮುಖಾಂತರ ಪ್ರಸಾರವಾಗುತ್ತಿದೆ. ಇದು ನಿಲ್ಲಬೇಕು. ಬಹಳ ಮುಖ್ಯವಾಗಿ ಸರ್ಕಾರವೂ ಕೂಡ ಕೆಲವೊಂದು guidelines ಹಾಕಬೇಕು. ಮಾಧ್ಯಮದವರೂ ಸಹ ಜವಾಬ್ದಾರಿಯುತವಾಗಿ ತಮ್ಮದೇ ಆದ self restrictions ಹಾಕಿಕೊಂಡು ಮಾದರಿ ಆಗಬೇಕೆಂದು ಹೇಳಿ ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ ಮತ್ತು ತರುಣ್ ಭಾರತ್ ವಿಷಯದಲ್ಲಿ this House should pass an unanimous resolution condemning and banning that newspaper in Karnataka.

ಉಪಾಧ್ಯಕ್ಷರು : ಮಾನ್ಯ ಸಾ.ರಾ. ಮಹೇಶ್ ರವರೆ ಮಾತನಾಡಿ.

ಶ್ರೀ ಸಾ.ರಾ. ಮಹೇಶ್ : ಮಾನ್ಯ ಅಧ್ಯಕ್ಷರೆ, ತರುಣ್ ಭಾರತ್ ಪತ್ರಿಕೆಯ ಬಗ್ಗೆ ಅನೇಕ ಸದಸ್ಯರು ಅಭಿಪ್ರಾಯವನ್ನು ಸಲ್ಲಿಸಿರುವುದನ್ನು

ನಾವು ನೋಡಿದ್ದೇನೆ. ಮಾನ್ಯ ಸಿ.ಎಸ್. ಪುಟ್ಟೇಗೌಡರವರು ಮಾತನಾಡುತ್ತಾ ಇವತ್ತಿನ ದಿವಸ ಪತ್ರಿಕೋದ್ಯಮ ಬಹಳ ಕಷ್ಟದಲ್ಲಿದೆ ಎಂದು ಹೇಳಿದರು. ನಮಗೂ ಸಹ ಗೊತ್ತಿದೆ. ಆದರೆ ಕೆಲವು ಪತ್ರಿಕೆಯವರು ಅದರ ಜೊತೆಗೆ ಕೆಲವು electronic mediaದವರು ಸಹ ಕಷ್ಟದಲ್ಲಿದ್ದಾರೆ. ಬರೀ ಪತ್ರಿಕೋದ್ಯಮದವರು ಎಂದು ಹೇಳುವುದಕ್ಕೆ ಆಗುವುದಿಲ್ಲ. ಪತ್ರಿಕೋದ್ಯಮ ಮತ್ತು electronic media 'ಕತ್ತಿಗಿಂತ ಲೇಖನಿ ಹರಿತ' ಎನ್ನುವ ಮಾತನ್ನು ನಾವು ಹೇಳುತ್ತೇವೆ. ಒಂದು ಲೇಖನಿ ಆ ಪತ್ರಿಕೆಯನ್ನು ಎಷ್ಟು ಜನ ಓದುತ್ತಾರೋ ಅವರ ಮೇಲೆಲ್ಲಾ ಪರಿಣಾಮ ಬೀರುತ್ತದೆ. ಇವತ್ತಿನ ದಿವಸದಲ್ಲಿ ನಾವು ನೋಡುತ್ತಿರುವುದು ಸಾಮಾನ್ಯವಾಗಿ ಈ ಪತ್ರಿಕೋದ್ಯಮದಲ್ಲಿ ಏನು ಬರೆಯುತ್ತಾರೆ, ಅದರ ಪರಿಣಾಮವನ್ನು ನಾವು ಹಳ್ಳಿಗಳಲ್ಲಿ ನೋಡುತ್ತೇವೆ. ರಾತ್ರಿಯ ವೇಳೆ ಸೈಕಲ್‌ನಲ್ಲಿ ಪತ್ರಿಕೆ ಹಾಕುತ್ತಿರುತ್ತಾರೆ. ಇನ್ನೊಂದು ವರ್ಷಕ್ಕೆ ಅವರೇ ವರದಿಗಾರರಾಗಿರುತ್ತಾರೆ. ಇದಾದ ನಂತರ ಸಹಸಂಪಾದಕರಾಗುತ್ತಾರೆ. ದಯಮಾಡಿ ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ. ನಿಜ ಅವರು ವರದಿಗಾರರಾಗುವುದರಲ್ಲಿ ತಪ್ಪಿಲ್ಲ. ಕೊನೇ ಪಕ್ಷ ಅದಕ್ಕೆ ಒಂದು minimum qualification ಇರಬೇಕು. ಯಾವುದನ್ನು ಬರೆದರೆ ಸರಿ ಅನ್ನಿಸುತ್ತದೆ. ಯಾವುದನ್ನು ನಾವು ಬರೆದರೆ ಸಮಾಜಕ್ಕೆ ಒಳ್ಳೆಯ message ಹೋಗುತ್ತದೆ. ಎನ್ನುವಂಥ ತಿಳಿವಳಿಕೆ ಅವರಿಗಿದ್ದರೆ ಸಮಾಜದ ಮೇಲೆ ಆಗುವಂಥ ದುಷ್ಪರಿಣಾಮಗಳು ಕಡಿಮೆಯಾಗುತ್ತದೆ. ಜೊತೆಗೆ ಕೆಲವು electronic media ಗಳಲ್ಲಿ ನೋಡುತ್ತೇವೆ. ಕೆಲವರು ಪಾಪ ಹತ್ತಾರು ವರ್ಷಗಳ ಕಾಲ ತುಂಬಾ ಕಷ್ಟಪಟ್ಟು ಪತ್ರಿಕೋದ್ಯಮವನ್ನು ನಡೆಸುತ್ತಿರುತ್ತಾರೆ. ಇಂಥವರು ಲೇಖನದ ಮೂಲಕ ಸಮಾಜವನ್ನು ತಿದ್ದುವಂಥ ಕೆಲಸವನ್ನು ಮಾಡುತ್ತಾರೆ. ಇನ್ನೂ ಕೆಲವರನ್ನು ನೋಡಿದಾಗ ಮದುವೆ ಮನೆಗಳಲ್ಲಿ ಶುಭಾ ಸಮಾರಂಭಗಳಲ್ಲಿ ವೀಡಿಯೋಗಳನ್ನು ಹಿಡಿಯುತ್ತಿರುತ್ತಾರೆ. ಇನ್ನೊಂದು 3 ತಿಂಗಳಿನಲ್ಲಿ ಅವರನ್ನು ನೋಡಿದರೆ ಯಾವುದೋ ಒಂದು ಪ್ರತಿಷ್ಠಿತ electronic media ದಲ್ಲಿ ದೂರದರ್ಶಕರಾಗಿ, ಛಾಯಾಗ್ರಾಹಕರಾಗಿ ಕೆಲಸ ಮಾಡುತ್ತಿರುತ್ತಾರೆ. ಇಂಥವರಿಂದ ಸಮಾಜಕ್ಕೆ ಏನು ಕೊಡುವುದಕ್ಕೆ ಸಾಧ್ಯ?

ದಯಮಾಡಿ ಈ ಸದನದಲ್ಲಿ ನಿಮ್ಮಲ್ಲಿ ಮನವಿ ಮಾಡುತ್ತಿದ್ದೇವೆ. ಒಬ್ಬ ಟೀಚರ್ ಆಗಬೇಕಾದರೆ ಹೇಗೆ TCH ಅನ್ನು minimum qualification ಎಂದು ಹೇಗೆ ಮಾಡಲಾಗಿದೆಯೋ ಒಬ್ಬರು Doctor ಆಗಬೇಕಾದರೆ Medical ಅನ್ನು minimum qualification ಎಂದು ಹೇಗೆ ಮಾಡಲಾಗಿದೆಯೋ ಅದೇ ರೀತಿ ಪತ್ರಿಕೋದ್ಯಮ ನಡೆಸಬೇಕಾದರೆ, ಒಬ್ಬರು ಪತ್ರಿಕೆಯಲ್ಲಿ ಕೆಲಸ ಮಾಡಬೇಕಾದರೆ minimum qualification ಅವರಿಗೆ ಇರಬೇಕು. ಮಾನ್ಯ ಸಂಪಾದಕರುಗಳು ಪತ್ರಿಕೋದ್ಯಮದಲ್ಲಿ Journalism ಅನ್ನು compulsory ಆಗಿ ಮಾಡಿರುವಂಥವರನ್ನು ನೇಮಕಾತಿ ಮಾಡಿಕೊಳ್ಳುವಂತೆ ಮಾಡಬೇಕು. ಅವರನ್ನು ಪತ್ರಿಕಾ ವರದಿಗಾರರನ್ನಾಗಿ ಉದ್ಯೋಗಕ್ಕೆ ಸೇರಿಸಿಕೊಳ್ಳಬೇಕಾದರೂ Journalism ಅನ್ನು compulsory ಯಾಗಿ ಮಾಡಬೇಕು. ಅದನ್ನು ಮಾನ್ಯ ಶ್ರೀ ಸುರೇಶ್ ಕುಮಾರ್‌ರವರು 'ನಿಯಮ' ಎಂದು ಕಡ್ಡಾಯ ಮಾಡಿದರೆ ಕೊನೆ ಪಕ್ಷ ಒಂದು ನ್ಯಾಯ ಸಿಗುತ್ತದೆ. ಅವರು ಏನು ಓದಿರುತ್ತಾರೋ ಗೊತ್ತಿರುವುದಿಲ್ಲ. ಹತ್ತಾರು ವರ್ಷ, 20–30 ವರ್ಷ ರಾಜಕಾರಣ ಮಾಡಿ, ಎಲ್ಲೋ ಒಂದು ಸಣ್ಣ ತಪ್ಪು ಮಾಡಿದಾಗ, ಕೆಲವು ಪತ್ರಿಕೆಗಳನ್ನು ನೋಡುತ್ತೇವೆ, ಕೊನೆ ಪಕ್ಷ ಬಹುವಚನದಿಂದ ಬರೆದಿರುವುದಿಲ್ಲ. ಕೆಟ್ಟದಾಗಿ ಬಿಂಬಿಸುವ ಕೆಲಸ ಮಾಡಿರುತ್ತಾರೆ. ಈ ಸದನದಲ್ಲಿ ನಾನು ಕೈ ಮುಗಿದು ಪ್ರಾರ್ಥನೆ ಮಾಡುತ್ತೇನೆ. ನಾವು ಮಾಡಿದಂಥ ತಪ್ಪನ್ನು ತೋರಿಸುವುದಕ್ಕಾಗಿಯೇ ಪತ್ರಿಕೋದ್ಯಮ ಮತ್ತು electonic media ಗಳಿರುವುದು, ಆದರೆ ಅವರಿಗೂ ಸಹ ಪತ್ರಿಕಾ ಧರ್ಮದ ಬಗ್ಗೆ, ನಾನು ಎಲ್ಲರ ಬಗ್ಗೆ ಹೇಳುತ್ತಿಲ್ಲ, ಕೆಲವರು ಯೋಚನೆ ಮಾಡಿ, ನಮ್ಮನ್ನು ಬಿಂಬಿಸುವ ಕೆಲಸವನ್ನು ಮಾಡಬೇಕು ಎಂದು ಹೇಳುತ್ತಾ ಜೊತೆಗೆ ನಿಜವಾಗಿ ಯಾರು ಪತ್ರಿಕೋದ್ಯಮ ಮತ್ತು electronic media ದಲ್ಲಿ ಕೆಲಸ ಮಾಡುತ್ತಿದ್ದಾರೆ ಅಂಥವರ ಬಗ್ಗೆಯೂ ಸಹ ಸರ್ಕಾರ ನಿರ್ದಾಕ್ಷಣ್ಯವಾಗಿ ಅವರ ಜೀವನದ ಬಗ್ಗೆ ಯೋಚನೆಯನ್ನು ಮಾಡಬೇಕೆಂದು ಸದನದಲ್ಲಿ ಪ್ರಾರ್ಥನೆಯನ್ನು ಮಾಡುತ್ತೇನೆ.

ಶ್ರೀ ವೀರಭದ್ರಪ್ಪ ಹಾಲಹರವಿ (ಹುಬ್ಬಳ್ಳಿ – ಧಾರವಾಡ ಪೂರ್ವ) : ಸನ್ಮಾನ್ಯ ಉಪಾಧ್ಯಕ್ಷರೇ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪತ್ರಿಕಾರಂಗವು ಒಂದು

ಪ್ರಮುಖವಾದ ಅಂಗವಾಗಿದೆ. ಎಲ್ಲಾ ಪತ್ರಿಕೆಗಳು ಅಥವಾ ಮಾಧ್ಯಮಗಳು ಕೆಟ್ಟವುಗಳಲ್ಲ. ಕೆಲವು ಮಾಧ್ಯಮಗಳು ಶಾಸಕರನ್ನು ಮುಜುಗರಕ್ಕೆ ಒಳಪಡಿಸುವುದು ಮತ್ತು ತೇಜೋವಧೆ ಮಾಡುತ್ತಿರುವುದು, ಪ್ರಜೆಗಳ ಮುಂದೆ ಅಪಹಾಸ್ಯಕ್ಕೀಡು ಮಾಡುತ್ತಿರುವುದು ವಾಸ್ತವ ಸತ್ಯ. ಮಾಧ್ಯಮಗಳಿಂದ ನಾವು ಒಳ್ಳೆಯದನ್ನು ಕೂಡ ತಿಳಿದುಕೊಳ್ಳುತ್ತಿದ್ದೇವೆ, ಮಾಡುತ್ತಿದ್ದೇವೆ. ಉದಾಹರಣೆಗೆ ವಿಜಯ ಕರ್ನಾಟಕದ "ಹೊಂಗಿರಣ" ಎನ್ನುವ ಲೇಖನ ಬರುತ್ತದೆ. ಅದು ಚಿಕ್ಕದಾಗಿದ್ದರೂ ನನ್ನ ಮೇಲೆ ಅಗಾಧವಾದ ಪ್ರಭಾವವನ್ನು ಬೀರುತ್ತದೆ. ಸಂಯುಕ್ತ ಕರ್ನಾಟಕದ "ವಿಚಾರ ಜ್ಯೋತಿ", ವಿಜಯವಾಣಿಯ "ಮುನ್ನಡಿ" ಇಂಥಹ ವಿಚಾರಗಳನ್ನು ಕೂಡಾ ನಾವು ಓದಿ ಸಮಾಜಕ್ಕೆ ಒಂದು ಕೊಡುಗೆಯಾಗಬೇಕು ಎಂದು ಹೇಳಿ ನಾವು ಹೊಸದರಲ್ಲಿ ಒಂದು ಪ್ರಯತ್ನವನ್ನು ಮಾಡುತ್ತಿದ್ದೇವೆ. ಅದರೆ ಮಾಧ್ಯಮದಲ್ಲಿ ಕೂಡಾ ಕೆಲವು ಸಮಾಜಕ್ಕಾಗಿ, ದೇಶಕ್ಕಾಗಿ ಕೆಲಸ ಮಾಡುವಂಥ ಪತ್ರಿಕಾ ವರದಿಗಾರರು ಕೂಡಾ ನಮ್ಮ ಮುಂದೆ ಇದ್ದಾರೆ. ಅವರು ಏನನ್ನೂ ಬಯಸಲಾರದೆ, ಸಮಾಜಕ್ಕೆ ಒಳ್ಳೇಯದಾಗಬೇಕು. ದೇಶಕ್ಕೆ ಒಂದು ಸೇವೆಯಾಗಬೇಕು ಎಂದು ನಿಕೃಷ್ಟ ಜೀವನದಲ್ಲಿ ಕೂಡಾ ಪತ್ರಿಕಾ ರಂಗದಲ್ಲಿ ಸೇವೆಯನ್ನು ಮಾಡುತ್ತಿದ್ದಾರೆ. ಕೆಲವು ಮಾಧ್ಯಮಗಳು ಮಾತ್ರ ಈ ಬ್ಲ್ಯಾಕ್‌ಮೇಲ್ ತಂತ್ರವನ್ನು ಅನುಸರಿಸುತ್ತಿದ್ದಾರೆ. ಉದಾಹರಣೆಗೆ ನಮ್ಮ ತರುಣ್ ಭಾರತ್ ಪತ್ರಿಕೆ. ಅದು ಎರಡು ರಾಜ್ಯಗಳ ಮಧ್ಯದಲ್ಲಿ ಭಾವನಾತ್ಮಕ ಸಂಬಂಧವನ್ನು ಕೆಡಿಸಿ, ಒಂದೊಂದು ಸಮಯದಲ್ಲಿ ಸಂಘರ್ಷಕ್ಕೂ ಕೂಡ ಈಡು ಮಾಡುವಂಥ ವರದಿಯನ್ನು ಪ್ರಕಟ ಮಾಡಿದೆ. ಆದ್ದರಿಂದ, ಇವತ್ತು ಮಾಧ್ಯಮಗಳು ನಮಗೆ ಬೇಕು. ನಮ್ಮ ಮರ್ಗದರ್ಶನಕ್ಕೆ ನಮ್ಮ ಹಿತ ಬೋಧನೆಗಳಿಗೆ ಮಾಧ್ಯಮಗಳಿಲ್ಲವೆಂದರೆ ಈ ಒಂದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾವುದೂ ಪ್ರಚಾರ ಆಗುವುದಿಲ್ಲ. ಮತ್ತು ಸಮಾಜಕ್ಕೆ ಒಳಿತನ್ನು ಕೊಡುವುದಕ್ಕೆ ಆಗುವುದಿಲ್ಲ. ಮಾಧ್ಯಮಗಳು ನಮಗೆ ಬಹಳ ಮುಖ್ಯವಾಗಿದೆ. ಆದರೆ ಯಾವ ತಪ್ಪನ್ನು ಮಾಡದೇ, ಆಧಾರರಹಿತ ವರದಿಗಳಿಂದ ಸಮಾಜದಲ್ಲಿ ಗೊಂದಲ ಈಡಾಗುತ್ತಿದೆ. ಅದು ಆಗಬಾರದೆಂದು ಈ ಸದನದಲ್ಲಿ ನಮ್ಮ ಒಂದು ಕಳಕಳಿಯ ವಿನಂತಿ ಇದೆ.

ನಾವು ಮಾಧ್ಯಮವನ್ನು ಗೌರವಿಸುವಂತಾಗಬೇಕು. ಮಾಧ್ಯಮಗಳ ಮೂಲಕ ಶಾಸಕರ ಕಠಿಣ ಪರಿಶ್ರಮವನ್ನು ಕ್ಷೇತ್ರದಲ್ಲಿ ಗುರುತಿಸುವಿಕೆ ಕೂಡಾ ಇಲ್ಲಿ ಆಗಬೇಕಾಗಿದೆ. ಆ ಒಂದು ಕೆಲಸದ ಕೊರತೆ ಆಗಿದೆ. ತರುಣ್ ಭಾರತ್ ಪತ್ರಿಕೆ ತಪ್ಪು ವರದಿಗಳನ್ನು ಪ್ರಕಟಿಸಿ, ಎರಡು ರಾಜ್ಯಗಳ ಮರಾಠಿ ಮತ್ತು ಕನ್ನಡ ಭಾಷಿಕರ ಭಾವನಾತ್ಮಕ ಭಾವನೆಗಳಿಗೆ ಧಕ್ಕೆ ತರುವಂಥ ವರದಿಯನ್ನು ಮಾಡಿದೆ. ಅದು ಖಂಡನೀಯ, ಈ ಸದನ, ಮಾನ್ಯ ಸಭಾಧ್ಯಕ್ಷರು, ಕಾನೂನಿನ ಚೌಕಟ್ಟಿನಡಿ ಇದಕ್ಕೆ ಒಂದು ಕಟ್ಟುನಿಟ್ಟಾದ ಕ್ರಮವನ್ನು ಕೈಗೊಳ್ಳಬೇಕು ಮತ್ತು ಹಲವಾರು ಶಾಸಕರು ವಿನಂತಿ ಮಾಡಿದ ರೀತಿಯಲ್ಲಿ ಇವತ್ತು ನಾವು ಶಾಲೆ ಮಕ್ಕಳು ಮತ್ತು ಮನೆಯಲ್ಲಿ ಕುಟುಂಬದೊಂದಿಗೆ ಕುಳಿತು ಟಿ.ವಿ. ಮಾಧ್ಯಮದ ಏನಾದರೂ ಒಂದು ಕಾರ್ಯಕ್ರಮ ನೋಡುವುದಕ್ಕೆ ಕುಳಿತರೆ ಇವತ್ತು ಎಷ್ಟು ಬೇಸರವಾಗುತ್ತಿದೆ ಎಂದರೆ ರಾಜಕಾರಣಿಗಳು ಈ ದೇಶಕ್ಕೆ ಏನೂ ಮಾಡುತ್ತಿಲ್ಲ. ಸಮಾಜಕ್ಕೆ ಏನೂ ಒಳ್ಳೆಯದು ಮಾಡುತ್ತಿಲ್ಲ ಎಂದು ಅಪಹಾಸ್ಯಕ್ಕೆ ಈಡಾಗುತ್ತಿದ್ದೇವೆ. ಮನೆ ಮಕ್ಕಳು ಕೂಡ ವ್ಯಂಗ್ಯ ಚಿತ್ರವನ್ನು ನೋಡಿ ನಗುತ್ತಿದ್ದಾರೆ. ವಾಸ್ತವಿಕ ವಿಚಾರ ನೋಡಿ. ದಯಮಾಡಿ ತಪ್ಪುಗಳಿದ್ದರೆ ಹೇಗಿದ್ದರೂ ತಾವು ಸಂದರ್ಶನ ಮಾಡುತ್ತಿದ್ದೀರಿ. ಅದನ್ನು ಕೂಡ ಒಂದು ಸಂದರ್ಶನವನ್ನು ಮಾಡುವ ಮೂಲಕ ನಮ್ಮ ತಪ್ಪುಗಳನ್ನು ತಿದ್ದಿಕೊಳ್ಳುವ ರೀತಿಯಲ್ಲಿ ವರದಿ ಮಾಡಬೇಕೇ ಹೊರತು, ನಾವು ಹೆತ್ತ ಮಕ್ಕಳಿಗೂ ಅಪಹಾಸ್ಯ ಆಗುವ ರೀತಿಯಲ್ಲಿ ಸಮಾಜದಲ್ಲಿ ತಲೆ ಎತ್ತಿ ಓಡಾಡದ ರೀತಿಯಲ್ಲಿ ಆಗಬಾರದು ಎಂದು ಹೇಳಿ, ಈ ಸಂದರ್ಭದಲ್ಲಿ ಅನೇಕ ಜನ ಶಾಸಕರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ನಾನೂ ನನ್ನ ಭಾವನೆಯನ್ನು ವ್ಯಕ್ತಪಡಿಸಿ, ಸದನ ಮತ್ತು ಸಭಾಧ್ಯಕ್ಷರು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತಿಗೆ ವಿರಾಮವನ್ನು ಕೊಡುತ್ತೇನೆ.

ಶ್ರೀ ಯು.ಟಿ. ಖಾದರ್ (ಮಂಗಳೂರು) : ಸನ್ಮಾನ್ಯ ಉಪಾಧ್ಯಕ್ಷರೇ, ಸದನದ ಶಾಸಕರಾದ ಶ್ರೀ ಅಭಯ ಪಾಟೀಲ್ ಶಾಮಾ ಭೀಮಾ ಘಾಟಗೆರವರ ವಿರುದ್ಧ ತರುಣ್ ಭಾರತ್ ಪತ್ರಿಕೆಯವರು ಅವಹೇಳನಕಾರಿಯಾಗಿ ಬರೆದಿರುವ ಬಗ್ಗೆ ಹಿರಿಯ ಸದಸ್ಯರೆಲ್ಲರೂ

ಮಾತನಾಡುತ್ತಾ ಕಠಿಣ ಕ್ರಮ ಕೈಗೊಳ್ಳಬೇಕೆಂದು ಹೇಳಿದ್ದಾರೆ. ಬಹುಶಃ ಇವತ್ತು ನಾವು ಒಳ್ಳೆಯ ಕೆಲಸ ಮಾಡಿದಾಗ ನಮಗೆ ಪ್ರೋತ್ಸಾಹ ಕೊಡುವುದು, ನಾವು ತಪ್ಪು ಮಾಡಿದಾಗ ನಮ್ಮನ್ನು ತಿದ್ದಿ ಸರಿಯಾದ ಮಾಹಿತಿ ಕೊಟ್ಟು ಸಮಾಜದಲ್ಲಿ ಇರುವಂಥ ಅಹಿತವಾದ ಯಾವುದಾದರೂ ಅನ್ಯಾಯವಾದಾಗ ಅದನ್ನು ಸರಿಪಡಿಸುವ ಅವಕಾಶವನ್ನು ಪತ್ರಿಕೆ ಮತ್ತು ಮಾಧ್ಯಮದವರು ಮಾಡುತ್ತಿದ್ದಾರೆ. ಇದನ್ನು ನಾವು ಅಭಿನಂದಿಸುವುದರ ಜೊತೆಗೆ ಬಹುಶಃ ಇವತ್ತು ಅಂಥವರ ಬಗ್ಗೆ ವಿಶೇಷವಾದ ಗೌರವವನ್ನು ನಾವು ಇಟ್ಟುಕೊಂಡಿದ್ದೇವೆ. ಆದರೆ ಕೆಲವೊಂದು ಕಡೆ ಕೆಲವು ಸಣ್ಣಪುಟ್ಟ ಪತ್ರಿಕೆಗಳು, ತರುಣ್ ಭಾರತ್ ಪತ್ರಿಕೆ ನೋಡಿದಾಗ ಅವರು ಬರೆಯುವುದೇ ಬೇರೆ, ಸದನ ಸಮಿತಿ ಕರೆದಾಗ ಅದಕ್ಕೆ ತಪ್ಪು ಮಾಹಿತಿ ಕೊಡುವುದು, ಅದು ಅಲ್ಲದೆ ಮಹಾರಾಷ್ಟ್ರದಲ್ಲಿ ಏಕೀಕರಣ ಸಮಿತಿಯವರು ಕೋರ್ಟ್‌ನಲ್ಲಿ ಒಂದು ಕೇಸ್ ಹಾಕಿದಂಥ ಸಂದರ್ಭದಲ್ಲಿ ಸಂಸದರು ಮತ್ತು ಶಾಸಕರಿಗೆ ಹಕ್ಕು ಕೊಡಬಾರದು ಎಂದು ಹೇಳಿ, ಹೈಕೋರ್ಟ್‌ನವರು ಮತವನ್ನು ಹಾಕುವುದಕ್ಕೆ ಅವಕಾಶವನ್ನು ಕೊಟ್ಟರೂ ಕೂಡ. ಇವರು ಪತ್ರಿಕೆಯಲ್ಲಿ ಶಾಸಕರು ಮತ್ತು ಸಂಸದರಿಗೆ ಮತದಾನದ ಹಕ್ಕಿಲ್ಲ. ಎಂದು ಹೇಳಿ ಬರೆಯುತ್ತಾರೆ. ಬಹುಶಃ ಹೈಕೋರ್ಟ್‌ಗಿಂತಲೂ ಬೇರೆ, ಸಂವಿಧಾನಕ್ಕಿಂತಲೂ ಮೇಲೆ ಎಂದು ತರುಣ್ ಭಾರತ್ ಪತ್ರಿಕೆಯ ಮಾಲೀಕರು ತಿಳಿದುಕೊಂಡಿದ್ದಾರೆ ಎಂದು ಕಾಣಿಸುತ್ತದೆ. ಆದರೆ ಇಂಥದ್ದಕ್ಕೆ ಅವಕಾಶ ಕೊಡದೆ ಇದರ ಬಗ್ಗೆ ತಕ್ಷಣ ತೀಕ್ಷ್ಣವಾದ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಸಮಾಜದಲ್ಲಿ ಈ ರೀತಿಯ ಅಘಾತ ಸೃಷ್ಟಿಸುವಂಥದಕ್ಕೆ ಯಾರಿಗೂ ಅವಕಾಶ ಕೊಡಬಾರದು. ಇವತ್ತು ನಾವು ಬಹಳಷ್ಟು ಕಡೆ ನೋಡುತ್ತಿದ್ದೇವೆ, ಸಣ್ಣ ಸಮಸ್ಯೆ ಇದ್ದಾಗ ಬಹುಶಃ ಅದನ್ನೇ ದೊಡ್ಡ issue ಮಾಡಿ ಸಮಾಜದಲ್ಲಿ ಅಶಾಂತಿ ಉಂಟು ಮಾಡುವಂಥ ಪರಿಸ್ಥಿತಿ ಕೂಡ ಆಗುವಂಥದ್ದನ್ನು ನೋಡುತ್ತಿದ್ದೇವೆ. ಜನರಿಗೆ ವಿಚಾರ ಏನು ಎನ್ನುವುದು ಗೊತ್ತಿರುವುದಿಲ್ಲ. ಇದರ ಬಗ್ಗೆ ಬಹಳಷ್ಟು ನಾವು ಆಲೋಚನೆ ಮಾಡಿ. ಭವಿಷ್ಯದ ಈ ಸಮಾಜದ ಬಗ್ಗೆ ಆಲೋಚನೆ ಮಾಡಿ ಸೂಕ್ತವಾದ ತೀರ್ಮಾನವನ್ನು ಸದನವು ತೆಗೆದುಕೊಳ್ಳಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮೀ ಲೇಔಟ್) : ಸನ್ಮಾನ್ಯ ಉಪಾಧ್ಯಕ್ಷರೇ, ಹಕ್ಕುಬಾಧ್ಯತಾ ಸಮಿತಿಯ ಒಂದು ವರದಿಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಶ್ರೀ ಅಭಯ್‌ಪಾಟೀಲ್ ಮತ್ತು ಶ್ರೀ ಶ್ಯಾಮಾ ಭೀಮಾ ಘಾಟಗೆ ಬಗ್ಗೆ ಬಹಳ ತುಚ್ಚವಾಗಿ ಅವಹೇಳನಕಾರಿಯಾಗಿ ತರುಣ್ ಭಾರತ್ ಮರಾಠಿ ಪತ್ರಿಕೆಯಲ್ಲಿ ಸಂಪಾದಕರು ಬರೆದಿರುವ ವಿರುದ್ಧ ಹಕ್ಕಚ್ಯುತಿಯನ್ನು ಮಂಡನೆ ಮಾಡಿದ್ದಾರೆ. ಎಲ್ಲಾ ಗೆಳೆಯರು ಮತ್ತು ಹಿರಿಯರು ಮಾತನಾಡಿದ ಹಾಗೆ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ಜೊತೆಯಲ್ಲಿ ಪತ್ರಿಕಾ ರಂಗವೂ ಸಹ ಪ್ರಜಾಪ್ರಭುತ್ವದಲ್ಲಿ ವಿಶೇಷವಾದ ಪಾತ್ರವನ್ನು ವಹಿಸುವುದನ್ನು ಕಾಣುತ್ತಿದ್ದೇವೆ. ಆದರೆ ಇವತ್ತು ಪತ್ರಿಕಾ ರಂಗದಲ್ಲಿ ನೀರು ಹರಿಯುವಾಗ ಕೆಸರು ಹೇಗೆ ಇರುತ್ತದೆಯೋ, ಹಾಗೆ ಈ ಸಮಾಜದ ಸ್ವಾಸ್ಥವನ್ನು ಕೆಡಿಸುವಂತಹ ಮತ್ತು ಪರಸ್ಪರ ಇರಬೇಕಾದ ಗೌರವಗಳನ್ನು ಅಗೌರವ ಕಾಣುವ ರೀತಿಯಲ್ಲಿ ಇವತ್ತು ಕೆಲವು ಪತ್ರಿಕೆಗಳು ವರ್ತನೆ ಮಾಡಿರುವುದು ವಿಶೇಷವಾಗಿ ತರುಣ್ ಭಾರತ್ ಪತ್ರಿಕೆ ಮಾತ್ರ ಇವತ್ತು ಬೆಳಕಿಗೆ ಬಂದಿದೆ. ಹಲವಾರು ಸದಸ್ಯರು ಹೇಳಿದ ಹಾಗೆ ಅದನ್ನೇ ವೃತ್ತಿಯನ್ನಾಗಿ ಮಾಡಿಕೊಂಡಿರುವುದನ್ನು ನಾವು ಕಾಣುತ್ತಿದ್ದೇನೆ. ಇವತ್ತು yellow journalism ಮಾಡುವಂತಹ ಬಹಳಷ್ಟು ಜನ ಇದ್ದಾರೆ. ಆಗಲೇ ಉದಾಹರಣೆ ಕೊಟ್ಟ ಹಾಗೆ, ಸೈಕಲ್‌ನಲ್ಲಿ ಓಡಾಡುತ್ತಿದ್ದವರು. ಕಾರುಗಳನ್ನು, ಬಂಗಲೆಗಳನ್ನು ತೆಗೆದುಕೊಂಡು ಕೋಟ್ಯಾಧೀಶ್ವರರಾಗಿರುವುದು ಸಾಕ್ಷಿಯಾಗಿ ನಿಂತಿದೆ. ಪ್ರಾಮಾಣಿಕವಾಗಿ ದುಡಿಯುತ್ತಿರುವ ನಮ್ಮ ಹಲವಾರು ಪತ್ರಿಕಾ ಮಿತ್ರರು ಅಥವಾ ಪತ್ರಿಕಾ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರು ಇವತ್ತಿಗೂ ಸಹ ಬಾಡಿಗೆ ಮನೆಯಲ್ಲಿ ಇದ್ದು ಕೊಂಡು ಮನೆ ಕಟ್ಟಲು ಸಾಧ್ಯವಿಲ್ಲದಂತಹ ಪರಿಸ್ಥಿತಿಯಲ್ಲಿದ್ದಾರೆ. ಆದರೆ ಇವತ್ತು ಭಾಷೆಯಲ್ಲಿ ಇರಬೇಕಾದ ಗುಣಮಟ್ಟವನ್ನೂ ಸಹ ಪತ್ರಿಕೆಗಳಲ್ಲಿ ಬಹಳ ತುಚ್ಚವಾಗಿ ಕಾಣುತ್ತಿದ್ದೇವೆ. ಇದು ಸರಿಯೋ, ತಪ್ಪೋ ಎಂದು ನಾವು ಹೇಳಬೇಕಾಗುತ್ತದೆ. ಉದಾಹರಣೆಗೆ ಶ್ರೀ ಬಂಗಾರಪ್ಪನವರಿಗೆ ಬಂ ಎಂದು, ಶ್ರೀ ಗುಂಡುರಾವ್ ರವರಿಗೆ ಗುಂ ಎಂದು, ಶ್ರೀ ಯಡಿಯೂರಪ್ಪನವರಿಗೆ ಯಡ್ಡಿ ಎಂದು ಶ್ರೀ ಸದಾನಂದಗೌಡರಿಗೆ ಸದಾ ಎಂದು ಬರೆಯುತ್ತಿರುವುದು. ಹೀಗೆ ಗುಣಮಟ್ಟ

ಎಲ್ಲಿಗೆ ಹೋಗುತ್ತಿದೆ ? ಇದು ಹೇಗಾಗಿದೆ ಎಂದರೆ ಇವತ್ತು ಎಫ್.ಎಂ. ನಲ್ಲಿ ಕನ್ನಡ ಭಾಷೆ ಎಷ್ಟು ಹದಗೆಡುತ್ತಿದೆಯೋ print media ನಲ್ಲಿ ಕೆಲವು ಪತ್ರಿಕೆಗಳಲ್ಲಿ ಬರೆಯುವುದನ್ನು ನೋಡಿದಾಗ ಕನ್ನಡ ಸಂಸ್ಕೃತಿ. ಈ ಮಟ್ಟಿಗೆ ಬಂದು ಬಿಟ್ಟಿತೇ ಎಂದು ಅನ್ನಿಸುತ್ತಿದೆ. ಶ್ರೀ ಡಿ.ವಿ.ಜಿ.ರವರು ಪತ್ರಕರ್ತರಾಗಿ ಕೆಲಸ ಮಾಡಿರುವುದನ್ನು ನಾವು ಕಂಡಿದ್ದೇವೆ. ಇವತ್ತು ಶ್ರೀ ಸರ್ ಮಿರ್ಜಾ ಇಸ್ಮಾಯಿಲ್‌ರವರು ತಮಗೆ ಕೊಟ್ಟಂತಹ ಗೌರವ ಸಂಭಾವನೆಯನ್ನು ತಿರಸ್ಕಾರ ಮಾಡಿದ್ದನ್ನು ನಾವು ಇತಿಹಾಸದ ಪುಟಗಳಲ್ಲಿ ನೋಡಿದ್ದೇವೆ. ನಾನು ಬರೆಯುವುದು ಸಂಭಾವನೆಗಾಗಿಯಲ್ಲ. ಮುಕ್ತವಾಗಿ ಬರೆಯುತ್ತೇನೆ ಎಂದು ಶ್ರೀ ಡಿ.ವಿ.ಜಿ.ಯವರು ಒಂದು ಕಡೆ ಉಲ್ಲೇಖ ಮಾಡುತ್ತಾರೆ. ಇವತ್ತು ಪತ್ರಿಕಾ ರಂಗದಲ್ಲಿ ಹದೆಗೆಡುತ್ತಿರುವ ಬಗ್ಗೆ ಹಿರಿಯ ಪತ್ರಕರ್ತರು ಮತ್ತು ಉದಯೋನ್ಮುಖ ಪತ್ರಕರ್ತರು ಮತ್ತು ಈ ಕ್ಷೇತ್ರದೆ ಬಗ್ಗೆ ಬಹಳ ಗಂಭೀರವಾಗಿ ಚಿಂತನೆ ಮಾಡಬೇಕಾಗುತ್ತದೆ. Electronic Media ದಲ್ಲಿ uncensored programmes ಬರುತ್ತಿರುವುದನ್ನು ನೋಡಿದಾಗ ಮುಂದಿನ ದಿನದಲ್ಲಿ ಏನು ಬರಬಾರದು. ಏನು ನೋಡಬಾರದು ಅದು ಬರುತ್ತದೆ. ಬಹುಶಃ ನಾನು ನನ್ನ ಕಾಲೇಜು ದಿನಗಳಲ್ಲಿ video parlour ಗಳ ವಿರುದ್ಧ ಹೋರಾಟ ಮಾಡಿದ್ದೆ. ಕೆ.ಎಲ್.ಇ. ಕಾಲೇಜ್ ಪಕ್ಕ ಸಾಗರ್ ಹೋಟೆಲ್ ಎಂದು ಇತ್ತು. ಅದನ್ನು ಸಾಗರ್ ವೀಡಿಯೋ ಕೇಂದ್ರ ಮಾಡಿ ಹುಡುಗರನ್ನು ಆಕರ್ಷಣೆ ಮಾಡಲು gradually uncensored film, blue film ತೋರಿಸಲು ಶುರು ಮಾಡಿದ. ಬಹುಶಃ ಇವತ್ತು TRP raise ಮಾಡಿಕೊಳ್ಳುವುದಕ್ಕೆ ಅಥವಾ ಸಮಾಜದಲ್ಲಿ ಹುಡುಗಾಡಿಕೆ ಮಾಡುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಸಮಾಜದ ಸ್ವಾಸ್ಥವನ್ನು ಕೆಡಿಸುವುದು ಬಹಳ ಸುಲಭ. ಇದನ್ನು ಗಂಭೀರವಾಗಿ ಚಿಂತನೆ ಮಾಡುತ್ತಾ ಸಮಸ್ಯೆ ಬಗೆಹರಿಸದೆ ಹೋದರೆ ಮುಂದಿನ ಪೀಳಿಗೆ ನಮ್ಮನ್ನು ಕ್ಷಮಿಸುವುದಿಲ್ಲ. ಪ್ರಚೋದನಕಾರಿಯಾಗಿ ಕೊಟ್ಟಿರುವ ವರದಿ, ರಸ್ತೆ ಅಗಲೀಕರಣ ಅವರ ಕ್ಷೇತ್ರದ ಅಭಿವೃದ್ಧಿಗಾಗಿ ಮಾಡಿದಾಗ, ಅದನ್ನು ಕೇಳಲಿಕ್ಕೆ ಹಲವಾರು ರೀತಿ ಇದೆ. ಆದರೆ, ಉದ್ದೇಶಪೂರ್ವಕವಾಗಿ ಮರಾಠಿ ಶಾಲೆಯನ್ನು shift ಮಾಡಿದರು ಎಂಬುದು ಅಲ್ಲಿರುವ ಕನ್ನಡಿಗರು–

ಮರಾಠಿಗರ ಬಾಂಧವ್ಯವನ್ನು ಹದಗೆಡಿಸುವ ವರದಿ ತರುಣ್ ಭಾರತ್ ಎಂಬ ಪತ್ರಿಕೆ ಮತ್ತು ಠಾಕೂರ್ ರವರು ಈ ಸಮಿತಿಯ ಮುಂದೆ ಬರಲು ಸಹ ಉದ್ಧಟತನವನ್ನು ತೋರಿಸಿದ್ದಾರೆಂದರೆ, ನಾವು ಇದನ್ನು ಗಂಭೀರವಾಗಿ ಪರಿಗಣಿಸದೆ ಹೋದರೆ, ಮುಂದಿನ ದಿನಗಳಲ್ಲಿ ನಮ್ಮ ವ್ಯವಸ್ಥೆ ಯಾವ ರೀತಿ ಹದಗೆಡುತ್ತದೆ ಎನ್ನವುದಕ್ಕೆ ಇದೊಂದು ಸಣ್ಣ ಉದಾಹರಣೆ. ರಾಮ ಇದ್ದಾಗ ರಾವಣ ಇರುತ್ತಾನೆ. ಕೃಷ್ಣ ಇದ್ದಾಗ ಕಂಸ ಇರುತ್ತಾರೆ. ಹಾಗೆ ಒಳ್ಳೆಯದಿದ್ದಾಗ ಕೆಟ್ಟದ್ದು ಇರುತ್ತದೆ. ನಾವು ನ್ಯಾಯವನ್ನು ಎತ್ತಿ ಹಿಡಿದು ಯಾವುದು ಸರಿ, ಯಾವುದು ತಪ್ಪು ಎಂದು ಹೇಳದೆ ಹೋದರೆ ಈ ಸದನವು ತಪ್ಪು ಮಾಡಿದಂತಾಗುತ್ತದೆ. ನಾನು ಶ್ರೀ ಅಭಯ್ ಪಾಟೀಲ ಮತ್ತು ಶ್ರೀ ಘಾಟಗೆಯವರನ್ನು ಅಭಿನಂದಿಸುತ್ತೇನೆ. ಮುಕ್ತವಾಗಿ ಹೇಳಬೇಕಾಗುತ್ತದೆ. ಎಲ್ಲರೂ ತಪ್ಪನ್ನು ಮಾಡುತ್ತಾರೆ. ಪತ್ರಿಕಾ ರಂಗದವರು ತಪ್ಪು ಮಾಡಿರಬಹುದು. ಅದನ್ನು ಹೇಳದೇ ಹೋದರೆ ಮೌನಂ ಸಮ್ಮತಿ ಲಕ್ಷಣಂ ಎಂಬಂತಾಗುತ್ತದೆ ಎಂಬ ಮಾತನ್ನು ಹೇಳಿ, ಇದನ್ನು ಗಂಭೀರವಾಗಿ ತಪ್ಪನ್ನು ಸರಿಪಡಿಸುವ ದಿಕ್ಕಿನಲ್ಲಿ ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿ ಪಡಿಸಿಬೇಕೆಂದು ಒತ್ತಾಯಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ನಾಯಕರು ಸದನದಲ್ಲಿ ತಮ್ಮದೇ ಆದ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದಾರೆ. ಇನ್ನು ಮುಖ್ಯವಾದ ಅಂಶವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈಗ ಒಂದು ಕಡೆ ಶ್ರೀ ಅಭಯ್ ಪಾಟೀಲ್, ಸಂಗಮೇಶ್ವರ್ ಮತ್ತು ಶ್ರೀ ಶಾಮಾ ಭೀಮಾ ಘಾಟಗೆ ರವರ ಬಗ್ಗೆ ವ್ಯಕ್ತಿಗತವಾಗಿ ಅನೇಕ ಅವಹೇಳನಾಕಾರಿ ವರದಿಗಳನ್ನು ಭಿತ್ತರಿಸಿದ್ದಾರೆ. ಇದರ ಜೊತೆಗೆ ಕರ್ನಾಟಕ ರಾಜ್ಯದಲ್ಲಿ ಬೆಳಗಾವಿ ಕನ್ನಡದ ಅವಿಭಾಜ್ಯ ಅಂಗ. ಆ ಪ್ರದೇಶದಲ್ಲಿ ನಮ್ಮ ವಿಧಾನಸಭೆ ನಡೆದ ಸಂದರ್ಭದಲ್ಲಿ ಕೂಡ ವಿಧಾನಸಭೆ ನಡೆಯುವುದು ಸಂವಿಧಾನಬಾಹಿರ ಎಂದು ಪತ್ರಿಕೆ ವರದಿ ಮಾಡಿದೆ. ಈ ಬಗ್ಗೆ ಬಹಳಷ್ಟು ಸೂಕ್ಷ್ಮವಾಗಿ ಆಲೋಚನೆಯನ್ನು ಮಾಡಬೇಕಿದೆ. ಕರ್ನಾಟಕ ರಾಜ್ಯದಲ್ಲಿರುವ ನಮ್ಮ ಹಕ್ಕನ್ನು ಅಥವಾ ನಮ್ಮ ಭಾಷೆಯನ್ನು ನಮ್ಮ ನೆಲವನ್ನು, ನಮ್ಮ ಜಲವನ್ನು ರಕ್ಷಣೆ ಮಾಡುವುದು

ಸಂವಿಧಾನದ ಮೂಲಕ ನಾವು ಪಡೆದುಕೊಂಡಿರುವ ಹಕ್ಕು. ಅದನ್ನೇ ಪ್ರಶ್ನೆ ಮಾಡುವಂತಹ ಪತ್ರಿಕೆಯ ವರದಿಯನ್ನು ನಾವು ತೀವ್ರವಾಗಿ ಖಂಡಿಸಬೇಕು. ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ನಡುವೆ ಇರುವ ಸಾಮರಸ್ಯವನ್ನು ಹಾಳು ಮಾಡುವುದು. ಇವತ್ತು ಮಹಾನಗರ ಪಾಲಿಕೆಯವರು Master Plan ಪ್ರಕಾರ ರಸ್ತೆ ನಿರ್ಮಾಣ ಮಾಡುವ ಸಂದರ್ಭದಲ್ಲಿ ಕನ್ನಡ ಶಾಲೆಯ ಕೊಠಡಿಗಳು ಇರುತ್ತವೆ. ಮರಾಠಿ ಶಾಲೆಗಳ ಕೊಠಡಿಗಳೂ ಇರುತ್ತದೆ. ಆದರೆ, ದುರುದ್ದೇಶದಿಂದ ಮಾನ್ಯ ಶಾಸಕರು ಮರಾಠ ಶಾಲೆಗಳನ್ನು ಸ್ಥಳಾಂತರ ಮಾಡುತ್ತಿದ್ದಾರೆಂದು ಮಾಡಿರುವ ವರದಿ ಅಲ್ಲಿನ ಕನ್ನಡಿಗರು ಹಾಗೂ ಮರಾಠಿಗರ ಮನಸ್ಸನ್ನು ಘಾಸಿಗೊಳಿಸಿದೆ. ಈ ಕುರಿತು ಅನೇಕ ಮಹನೀಯರು ಮಾತನಾಡಿದ್ದಾರೆ. ಇದಕ್ಕೆ ಏನಾದರೂ ಕಡಿವಾಣ ಹಾಕಬೇಕಾಗುತ್ತದೆ. ಪತ್ರಿಕಾ ರಂಗ ಸಾರ್ವಜನಿಕ ಜೀವನದಲ್ಲಿ ಮಹತ್ತರ ಸ್ಥಾನ ಪಡೆದುಕೊಂಡಿದೆ. ಸಮಾಜದ ಕೊಳಕನ್ನು ತೆಗೆಯುವ ಕೆಲಸ ಮಾಡುವುದು ಯಾವುದಾದರೂ ಇದ್ದರೆ ಅದು ಪತ್ರಿಕಾ ರಂಗ ಎಂದು ನಾವಾದರೂ ಧಾವಿಸ್ದಿದ್ದೇವೆ. ಆದರೆ, ಸಮಾಜದಲ್ಲಿ ಇವತ್ತು ಅಶಾಂತಿ ಮತ್ತು ರಾಜ್ಯ–ರಾಜ್ಯದಲ್ಲಿ ಭಾಷೆಯ ಕಲುಷಿತ ವಾತಾವರಣ ನಿರ್ಮಾಣ ಮಾಡುವ ಇಂತಹ ಪತ್ರಿಕೆಗಳಿಗೆ ಕಡಿವಾಣ ಹಾಕಿ ಕಾನೂನು ಸಚಿವರು ಇರಬಹುದು ಮತ್ತು ತಾವೂ ಸಭಾಧ್ಯಕ್ಷರು ಪತ್ರಿಕೆಯ ಸಂಪಾದಕರನ್ನು ಸದನಕ್ಕೆ ಕರೆಸಿ ಛೀಮಾರಿ ಹಾಕಬೇಕು. ಹೀಗೆ ಲಂಗು ಲಗಾಮು ಇಲ್ಲದೆ ಪತ್ರಿಕೆಯಲ್ಲಿ ಬರೆಯುತ್ತಾ ಹೋದರೆ ಸಮಾಜದಲ್ಲಿ ಸಾಮರಸ್ಯವನ್ನು ಕಳೆದುಕೊಳ್ಳುತ್ತೇವೆ ಎಂದು ಹೇಳಿ. ಇವತ್ತು ಏನು ತಮ್ಮ ಶ್ರೀ ಅಭಯ್ ಪಾಟೀಲ್ ರವರಿಗೆ, ಶ್ರೀ ಶಾಮಾ ಭೀಮಾ ಘಾಟಗೆ ರವರಿಗೆ ಅನ್ಯಾಯವಾಗಿದೆ ಮತ್ತು ಅವರ ವ್ಯಕ್ತಿಗತ ಜೀವನಕ್ಕೂ ಸಹ ಕುಂದು ಆಗುವ ರೀತಿಯಲ್ಲಿ ವರದಿ ಮಾಡಿರುವವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ವೆಂಕಟರಾವ್ ನಾಡಗೌಡ (ಸಿಂಧನೂರು): ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಹಕ್ಕು ಬಾಧ್ಯತಾ ಸಮಿತಿಯವರು ಇದೇ ವಿಧಾನಸಭೆಯ ಸದಸ್ಯರುಗಳಾದ ಶ್ರೀ ಅಭಯ್ ಪಾಟೀಲ್ ಮತ್ತು ಶ್ರೀ

ಶಾಮಾ ಭೀಮಾ ಘಾಟಗೆ ರವರ ಹಕ್ಕು ಚ್ಯುತಿಯ ಬಗ್ಗೆ ಬಹಳಷ್ಟು ಚರ್ಚೆಯಾಗಿದೆ. ಪತ್ರಿಕಾ ರಂಗದವರಿಗೂ ಕೂಡ ಅವರದೇ ಆದ ethics ಇರುತ್ತದೆ. ಆದರೆ ಇವತ್ತು ಒಳ್ಳೊಳ್ಳೆ ಪತ್ರಿಕೆಗಳು ಹೊರಗೆ ಬಂದಿದ್ದರೂ ಕೂಡ ಅವರು ತಲೆ ತಗ್ಗಿಸುವ ಕೆಲಸಗಳನ್ನು ಕೆಲವು ಮಾಧ್ಯಮಗಳು ಮಾಡುತ್ತಿದೆ. ನಾನೂ 2–3 incidents ನೋಡಿದ್ದೇನೆ. ವಿಧಾನಸಭೆಯ ಒಳಗೆ ಇದ್ದದ್ದು ಪತ್ರಿಕೆಗಳು ಎಲ್ಲಿಯೂ ಸಿಗುವುದಿಲ್ಲ. ಅವರು ಹೇಗಿದ್ದಾರೆಂದರೆ, ಆ ಪತ್ರಿಕೆಗಳು ವಿಧಾನ ಸೌಧದ ಒಳಗೆ ಬಿಟ್ಟರೆ ಬೇರೆ ಎಲ್ಲೂ ಸಿಗುವುದಿಲ್ಲ. ಮೂರ್ನಾಲ್ಕು ಪತ್ರಿಕೆಗಳನ್ನು print ಮಾಡಿಕೊಂಡು ಒಳಗೆ ಬರುತ್ತಾರೆ. ಯಾವ ಮಂತ್ರಿಗಳ ಬಳಿ ಕೆಲಸ ಇರುತ್ತದೆ. ಆವರ ಬಳಿ ಬರುತ್ತಾರೆ. ಉದಾಹರಣೆಗೆ ಶ್ರೀ ಉದಾಸಿಯವರ ಬಳಿ ಕೆಲಸವಿದ್ದರೆ ಶ್ರೀ ಉದಾಸಿ ಸಾಹೇಬರು ಒಂದು ಫೋಟೋ ಹಾಕುವುದು. ಅವರನ್ನು ಇಂದ್ರ–ಚಂದ್ರ ಎಂದೆಲ್ಲಾ ಬರೆದುಕೊಂಡು ಬರುವುದು. ಅವರಿಗೊಂದು ಕೊಡುವುದು. ನಾವು ಅವರ ಮುಂದೆ ಕುಳಿತಿದ್ದರೆ ನಮಗೂ ಒಂದು ಪೇಪರ್ ಕೊಡುವುದು. ಅದನ್ನು ಓದಿದ ಕೂಡಲೇ ನಮ್ಮದೊಂದು ಕೆಲಸ ಇದೆ ಎಂದು ಅವರು ಮುಂದೆ ಅರ್ಜಿ ಇಡುತ್ತಾರೆ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಆಲಂಕರಿಸಿದರು)

ನೀವು ಬೆಂಗಳೂರು ಸಿಟಿಯಲ್ಲಿ ಎಲ್ಲಿ ಹುಡಕಿದರೂ ಆ ಪೇಪರೇ ಸಿಗುವುದಿಲ್ಲ. ಅವರ ಹತ್ತಿರ ಅಷ್ಟೆ ಇರುತ್ತದೆ. 4–5 ಪೇಪರ್‌ಗಳನ್ನು ಮಾತ್ರ print ಮಾಡಿಕೊಂಡು ಬರುತ್ತಾರೆ. ಇಂತಹ ಪತ್ರಿಕೆಗಳು ಕೂಡಾ ವಿಧಾನ ಸಭೆಯ ಒಳಗೆ ಇವೆ. ಈಗ ನನ್ನ ಮುಂದೆಯೇ ಒಂದು incident ಆಯಿತು. ಲಂಕೇಶ್ ಪತ್ರಿಕೆ ವರದಿಗಾರರು ನಾನು ಕೆ.ಎಂ.ಎಫ್. ಛೇರ್ಮನ್ ಆಗಿದ್ದಾಗ ನನಗೆ ಫೋನ್ ಮಾಡಿ ನಿಮಗೆ ಭೇಟಿಯಾಗಬೇಕು ಎಲ್ಲೇದ್ದೀರಿ ಎಂದರು. ಕಚೇರಿಯಲ್ಲಿದ್ದೇವೆಂದು ಹೇಳಿದೆ. ಅವಾಗಲೇ ಒಂದು incident ಆಗಿತ್ತು. ಶಿರಾದಲ್ಲಿ ಗೋಲಿಬಾರ್ ಆಗಿ ರೈತರು ಸತ್ತಿದ್ದರು. ಅವತ್ತು ಶೇಂಗಾ ಖರೀದಿಗೆ ಆವತ್ತಿನ ಸಚಿವರ ಜೊತೆ ನಾವು ಕೂಡಾ ಅಲ್ಲಿಗೆ ಹೋಗಿದ್ದೆವು. ಅದರ ಬಗ್ಗೆ ಕೇಳುವುದಕ್ಕೆ ಬರುತ್ತೇವೆಂದರು ಬನ್ನಿ ಎಂದು ಹೇಳಿದೆ. ಬಂದು ಇದನ್ನೆಲ್ಲಾ ಕೇಳಿದರು. ಏನೇನು ಆಗಿದೆ. scenario ಏನು, ಅದು ಇದು

ಎಲ್ಲಾ ಕೇಳಿದರು. ಕೇಳಿದ ಮೇಲೆ ನಿಮ್ಮ ಸಂಸ್ಥೆ ಹೇಗೆ ನಡೆಯುತ್ತಿದೆ ಎಂದು ಕೇಳಿದರು. ನಮ್ಮ ಸಂಸ್ಥೆ ಹೀಗಿದೆ. ಹೀಗೆ ನಡೆಯುತ್ತಿದೆ ಎಂದು ಹೇಳಿದೆವು ಬಹಳ ಚೆನ್ನಾಗಿ ನಡೆಸಿದ್ದೀರಿ ನಾಡಗೌಡರೆ ನಿಮ್ಮದು ಒಂದು ಫೋಟೋ ಕೊಡಿ ಎಂದರು ನಮ್ಮ ಪಿ.ಎ. ಒಂದು ಫೋಟೋ ಕೊಟ್ಟ. ಮರುದಿನ ಪೇಪರ್ ನೋಡಿದರೆ ಪತ್ರಿಕೆಯಲ್ಲಿ ನನ್ನದು. ಎಸ್.ಎಸ್. ಪಾಟೀಲ್‌ರು ಸಹಕಾರ ಸಚಿವರಾಗಿದ್ದರು ಅವರದು, ದೇವೇಗೌಡರದು, ರೇವಣ್ಣವವರು, ಆಗ ನಮ್ಮ ಬಸವರಾಜ ರಾಯರೆಡ್ಡಿಯವರು ಇದ್ದರು. ಅವರದು ಒಂದು ಫೋಟೋ ಹಾಕಿ. ನಾನು ಅವರ ಶಿಷ್ಯ ಕೋಟಿ ಕೋಟಿ ಲೂಟಿ ಮಾಡಿದ್ದಾರೆಂದು ಬರೆದು ಬಿಟ್ಟರು. ನನ್ನ ಹತ್ತಿರವೇ ಎಲ್ಲಾ information ತೆಗೆದುಕೊಂಡು real seanario ಏನಿದೆ ಎಂದು ಕೇಳಿ. ಪತ್ರಿಕೆಯಲ್ಲಿ ನೋಡಿದರೆ ನನ್ನ ಒಂದು ಫೋಟೋ ಹಾಕಿದರು. ನಾನು ಮಾನನಷ್ಟ ಮೊಕದ್ದಮೆ ಹಾಕಬೇಕೆಂದು ಹೇಳಿ ಬೋರ್ಡ್‌ನಲ್ಲಿಟ್ಟೆ ಬೋರ್ಡ್‌ನಲ್ಲಿ ಆವಾಗ ಶ್ರೀ ಡಿ.ಇ. ಪ್ರಸಾದ್‌ರವರು ಎಂ.ಡಿ. ಅವರು ಹೇಳಿದರು. ಸರ್, ಇಷ್ಟೆಲ್ಲಾ ದೊಡ್ಡ ದೊಡ್ಡ ಲೀಡರ್ಸ್ ಜೊತೆ ನಿಮ್ಮ ಫೋಟೋ ಹಾಕಿದ್ದಾರೆ. ನೀವು ಏಕೆ ತಲೆ ಕೆಡಸಿಕೊಳ್ಳುತ್ತೀರಿ ಬಿಡಿ ಎಂದು ಅದನ್ನು ಮುಚ್ಚಿಡಿಸಿದರು. ಈ ರೀತಿಯ ಪತ್ರಿಕೆಗಳವರು ಬರೆಯುತ್ತಾರೆ. ಈಗ ಟಿ.ವಿ. ಮಾಧ್ಯಮದವರು ಬೇಗ ವರದಿ ಕೊಡಬೇಕೆನ್ನುವ ಆವಸರದಲ್ಲಿ ಇಲ್ಲಿ ನಾವು ಉದಾಸಿ ಮನೆಯಲ್ಲಿ ಕುಳಿತುಕೊಂಡಿದ್ದೇವೆಂದರೆ, ಅಲ್ಲೊಂದು ಬಿಟ್ಟುಬಿಡುವುದು ಅವರ ಮನೆಗೆ ಹೋದರು ಇವರ ಮನೆಗೆ ಹೋದರು. ಸುಮ್ಮನೆ ಏನ್ರಿ ನೀವು, ನಾವು ಅಲ್ಲಿ ಹೋಗಿದ್ದೇವೆಂದು ಬರೆದಿದ್ದೀರಿ ಎಂದರೆ, 'ಹೌದಾ ಸಾರ್ ? ಬಂದಿತ್ತು ಮಾಹಿತಿ ಸರ್, ಈಗ ಎರಡು ನಿಮಿಷದಲ್ಲಿ ಇಲ್ಲವೆಂದು ಕೊಡುತ್ತೇವೆ ಎಂದು ಹೇಳಿ ಇಲ್ಲವೆಂದು ಹೇಳಿದರು ಎಂದು ಮತ್ತೆ ಬಿಡುವುದು. ಇವುಗಳನ್ನು ಮಾಡುತ್ತಾರೆ. ಒಂದು incident ನಮ್ಮ ದೇವದುರ್ಗದ by-election ನಡೆಯುತ್ತಿತ್ತು. ದೇವೇಗೌಡರು ಬಂದರು ನಾನು ರಿಸಿವ್ ಮಾಡಿಕೊಳ್ಳವುದಕ್ಕೆ ಹೋದೆ ಟಿ.ವಿ. ಮಾಧ್ಯಮದವರು ಬಂದ ಕೂಡಲೇ ಟಿ.ವಿ. ಯವರನ್ನು ಸಿಕ್ಕಾಪಟ್ಟೆ ಬೈದು ಬಿಟ್ಟರು ಏನ್ರಿ ನಿಮಗೆ ಘನತೆ ಮಾನ ಮಾರ್ಯದೆ ಇದೆಯೆನ್ರಿ ಎಂದು ಬೈದುಬಿಟ್ಟರು. ಏಕೆ

ಬೈಯುತ್ತಿದ್ದಾರೆಂದರೆ ಇವರೇನು ಮಾಡಿದ್ದಾರೆಂದರೆ, ಪಲ್ಸ್ ಪೋಲಿಯೋದಿಂದ ಮಗು ಸತ್ತಿತ್ತು ಎಂದು ಒಂದು ಹೇಳಿಕೆ ಕೊಟ್ಟು ಬಿಟ್ಟರು. ಆದರಿಂದ ಎಷ್ಟು ಅನಾಹುತವಾಗುತ್ತದೆಂಬುದು ಅವರನ್ನು ಕೆರಳಿಸಿತು. ಆ ಕಾರ್ಯಕ್ರಮವನ್ನು ಮಾಡಬೇಕಾದರೆ ನಾವು ಎಷ್ಟು ಶ್ರಮವಹಿಸಿರುತ್ತೇವೆ. ಎಷ್ಟೆಲ್ಲಾ ಕ್ರಮವನ್ನು ಹಾಕಿರುತ್ತೇವೆ. ನೀವು ಮಾಡುವ ಒಂದು ತಪ್ಪಿನಿಂದ ಯಾವುದು ಸರಿ. ಯಾವುದು ತಪ್ಪೆಂದು ತಿಳಿದುಕೊಳ್ಳಲಾರದೆ ಈ ರೀತಿ ವರದಿ ಕೊಟ್ಟು ಬಿಡುತ್ತೀರಿ. ಎಲ್ಲಾ ಕಡೆ ಪ್ರಚಾರವಾಗಿ ಯಾರು ಪೋಲಿಯೋ ಹಾಕಿಸಲಿಲ್ಲವೆಂದರೆ ಮತ್ತೆ ಅದು ಎಷ್ಟು ಕೆಟ್ಟ ಪರಿಣಾಮ ಬೀರುತ್ತದೆನ್ನುವುದನ್ನು ಅವರು ಮಾಧ್ಯಮದಲ್ಲಿ ಕುಳಿತುಕೊಂಡು ಹೇಳಿದರು. ಈ ರೀತಿ ಅವರು ಅವಸರದಲ್ಲಿ ಮಾಡುವ ಕೆಲಸಗಳು ಎಂತೆಂಥ ಅವಶ್ಯಕತೆಗಳಿಗೆ ಕಾರಣವಾಗುತ್ತದೆನ್ನುವುದನ್ನೂ ಕೂಡ ಮಾಧ್ಯಮಗಳು ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ. ಎಲ್ಲೋ ಒಂದು ಕಡೆ ಅವರಸರಲ್ಲಿ ದಾರಿ ತಪ್ಪುತ್ತಿದ್ದೇವೆ. ನಾವು ಬೆಳಿಗ್ಗೆ ಎದ್ದ ತಕ್ಷಣ ಕೆಲವು ಮಾಧ್ಯಮಗಳಲ್ಲಿ ಏನು ಬಂದಿದೆ ಎನ್ನುವುದನ್ನು ನೋಡುತ್ತೇವೆ. ಶಾಲೆ ಕಾಲೇಜುಗಳಲ್ಲಾಗಿರುವ ತೊಂದರೆ, ಊರಿನಲ್ಲಿ ಕುಡಿಯುವ ನೀರಿನ ತೊಂದರೆ, ರಸ್ತೆ ಹಾಳಾಗಿದೆ ಎಂದು ಕೊಟ್ಟರೆ, ನಾವು ಅವುಗಳನ್ನು ಓದಿ, ಅಧಿಕಾರಿಗಳಗೆ ನೋಡಿ ಪತ್ರಿಕೆಗಳಲ್ಲಿ ಬಂದಿದೆ. ಏನು ಮಾಡಿದ್ದೀರಿ. ಏಕೆ ಮಾಡಿದ್ದೀರೆಂದು ಸ್ಥಳಕ್ಕೆ ಹೋಗಿ ಮಾಧ್ಯಮದವರನ್ನು ಕರೆಯಿಸಿ. ನೀವು ವರದಿ ಮಾಡಿದ್ದೀರಪ್ಪ, ಒಳ್ಳೆಯದಾಯಿತು ಎಂದು ಕೆಲಸ ಮಾಡುತ್ತೇವೆ. ಅಂಥ ವರದಿಗಳನ್ನು ಮಾಡಬೇಕೇ ವಿನಾ, ನೀವು ನಮಗೆ ಏನು ಬೇಕಾದರೂ ಬರೆಯುವುದಕ್ಕೆ ಬರುತ್ತದೆಂದು, ಕೆಲವು ಮಾಧ್ಯಮಗಳಲ್ಲಿ ಅವರು ಬಳಸುವ ಶಬ್ದವನ್ನು ನೋಡಿಬಿಟ್ಟರೆ ಯಾರಿಗಾದರೂ ಸಿಟ್ಟು ಬರುತ್ತದೆ. ಅವರ ಹತ್ತಿರ ಯಾವುದೇ ದಾಖಲೆಗಳಿಲ್ಲದೆ, ದಯವಿಟ್ಟು ಯಾರದೋ ತೇಜೋವಧೆ ಮಾಡುವುದು ಆಗಬಾರದು. ನನಗೆ ಒಂದು ಸಾರಿ ಆಯಿತು. ನಾಡಗೌಡರ ಬಂಧನ ಬಿಡುಗಡೆ ಎಂದು ಪತ್ರಿಕೆಯಲ್ಲಿ ಬಂತು. ನಾನು ಮಲಗಿದ್ದೆ ಒಬ್ಬರು ಫೋನ್ ಮಾಡಿ, ಏನ್ರಿ ಬಂಧನ, ಬಿಡುಗಡೆ ಏನು ನಾಡಗೌಡರೆ ಎಂದು ಕೇಳಿದರು. 'ಬೆಳಗ್ಗೆ ಬೆಳಗ್ಗೆ ಏಕೆ ಮಾರಾಯ ನನ್ನ ತಲೆ ತಿನ್ನುತ್ತೀಯಾ" ನನಗೆ ಏತಕ್ಕೆ

ಕಾಡಿಸುತ್ತೀಯಾ? ಎಂದೆ ಪತ್ರಿಕೆ ಕಳುಹಿಸಿದ್ದನ್ನು ನೋಡಿ ನಾನು ಗಾಬರಿಯಾದೆ. ಅದನ್ನು ಓದಿದರೆ ನನ್ನನ್ನು ಹಿಡಿದು ಅರೆಸ್ಟ್ ಮಾಡಿ ಕೋರ್ಟ್‌ನ ಮುಂದೆ ಪ್ರೊಡ್ಯುಸ್ ಮಾಡಿ ಬಿಟ್ಟಿದ್ದಾರೆಂದು ಬರೆದುಬಿಟ್ಟರು. ನಾನು ನನ್ನ ಕಚೇರಿಗೆ ಗಲಾಟೆಯಾಗಿದೆಯೇನೋ ಎಂದು ತಿಳಿದುಕೊಳ್ಳುವುದಕ್ಕೆ ಫೋನ್ ಮಾಡಿದೆ, ಎಲ್ಲಿ ನೋಡಿದರೂ ಏನೂ ಇಲ್ಲ.ಎಸ್.ಪಿ. ಅವರನ್ನು ಕೇಳಿದರೆ, ನನಗೂ ಆಶ್ಚರ್ಯವಾಗಿದೆ ನಿಮ್ಮದು ಬಂದಿದೆಯಲ್ಲಿ ಏನು ಸುದ್ದಿ ಎಂದರು. ನಾನು ಆಗ ಇನ್ನೂ ಶಾಸಕರಾಗಿಲಿಲ್ಲ. ನಾನು ಕೆಎಂಎಫ್ ಚೇರ್ಮನ್ ಇದ್ದಾಗ ಆಗಿದ್ದು. ಈ ರೀತಿ ಬರೆಯುತ್ತಾರೆ. ನಾನು ಈ ಪತ್ರಿಕೆಯವರನ್ನು ಕೇಳಿದೆ ಏನ್ರಿ ಈ ರೀತಿ ಬರೆದಿದ್ದೀರಲ್ಲ? ನನ್ನನ್ನು ಯಾವ ಕೋರ್ಟಿಗೆ ಹಿಡಿದುಕೊಂಡು ಹೋದರು? ಎಲ್ಲಿ ಆರೆಸ್ಟ್ ಆಗಿದೆ? ಎಲ್ಲಿ ನೋಡಿದ್ದೀರಿ? ಏನಿದು? ಎಂದರೆ? ಇಲ್ಲ ಸರ್, ಮಾಹಿತಿ ಬಂದಿತ್ತು ಹಾಗಾಗಿ ಬರೆದುಬಿಟ್ಟೆ ಎಂದು ಹೇಳುತ್ತಾರೆ. ಈಗ ನೀವು ಇಲ್ಲವೆಂದು ಹೇಳಿ ಬರೆಯುತ್ತೇವೆ ಎಂದು ಹೇಳಿದರು. ಈ ತರಹ ಮಾಧ್ಯಮದವರು ಬರೆಯುವುದರಿಂದ ನಾನು ಅರೆಸ್ಟ್ ಆಗಿರುವ ಸುದ್ದಿ ಸಾವಿರಾರು ಜನರಿಗೆ ಹೋಯಿತು. ನನ್ನನ್ನು ಅರೆಸ್ಟ್ ಮಾಡಿಲ್ಲವೆಂದು ನಾನು ಹೇಗೆ ಹೇಳಬೇಕು. ನಾನು ಮತ್ತೆ ಒಂದು ಪ್ರೆಸ್ ಮೀಟ್ ಮಾಡೇ ಹೇಳಬೇಕಲ್ಲಾ? ಈ ತರಹದ ಸನ್ನಿವೇಶಗಳು ನಿರ್ಮಾಣವಾಗುತ್ತದೆ. ಸಾರ್ವಜನಿಕ ಬದುಕಿನಲ್ಲಿರುವಾಗ ನಮ್ಮ ಬಗ್ಗೆ ಬರೆಯಿರಿ. ನಾವು ಮಾಡಿರುವ ತಪ್ಪುಗಳ ಬಗ್ಗೆ ಬರೆಯುವುದಕ್ಕೆ ಸಂಪೂರ್ಣವಾದ ಅಧಿಕಾರಿವಿದೆ. ನಮ್ಮನ್ನು ತಿದ್ದತಕ್ಕಂಥ ಶಕ್ತಿ ನಿಮಗಿದೆ. ಅದನ್ನು ಮಾಡುವುದು ಬಿಟ್ಟು ಅವಸರದಲ್ಲಿ ಏನೇನೋ ಸಂಬಂಧವಿಲ್ಲದ ವಿಷಯಗಳನ್ನು ಬರೆದು ಈ ತರಹ ತೇಜೋವಧೆ ಮಾಡುತ್ತಾರೆ ಎಂದರೆ, ಇವರನ್ನು ಕೇಳುವವರಿಲ್ಲವೆಂದಾಗಬಹುದು. ನಾನು ಅಧ್ಯಕ್ಷರಲ್ಲಿ ವಿನಂತಿ ಮಾಡುವುದೇನೆಂದರೆ, ಇದಕ್ಕೆ ಒಂದು ಕಡಿವಾಣ ಹಾಕಲೇಬೇಕಾಗುತ್ತದೆ. ಇದನ್ನು ನಿಜವಾಗಿ ಪತ್ರಿಕಾ ರಂಗದಲ್ಲಿರುವವರು ಕೂಡ ಒಪ್ಪುತ್ತಾರೆ. ನಿಜವಾಗಿ ಶ್ರಮಪಟ್ಟು ದೊಡ್ಡ ದೊಡ್ಡ ಸಮಸ್ಯೆ ಪತ್ರಿಕೆಗಳನ್ನು ಕಟ್ಟಿರುವವರೆಲ್ಲಾ ಇದಕ್ಕೆ ಪ್ರೋತ್ಸಾಹ ಕೊಡುತ್ತಾರೆಂದು ನಾನು ಭಾವಿಸುತ್ತೇನೆ. ಈ ಸಣ್ಣ ಸಣ್ಣ

ಪತ್ರಿಕೆಗಳು ಎಲ್ಲೆಲ್ಲೊ ನಾಯಿಕೊಡೆ ತರಹ ಹುಟ್ಟುಕೊಳ್ಳುತ್ತವೆ, ಏನು ಬೇಕಾದರೂ ಬರೆಯುತ್ತಾರೆ. ಅವರಿಗೆ ಹೇಳುವವರಿಲ್ಲ. ಕೇಳುವವರಿಲ್ಲ, ಅವರದೇ ಒಂದು ಸಾಮ್ರಾಜ್ಯ ಇನ್ನೊಂದು ಈಗ ಹೊಸದು ನಡೆದುಬಿಟ್ಟಿದೆ. ಎಲ್ಲೋ ಪತ್ರಿಕೆಗಳವರಿರುತ್ತಾರೆ. ನಮ್ಮ ಹತ್ತಿರ ಬಂದು ಒಂದು ಕ್ಯಾಲೆಂಡರ್‌ಗಳಲ್ಲಿ ನಮ್ಮ ಫೋಟೋ ಹಾಕಿಕೊಂಡು ಬಂದು ಸರ್, ನಿಮ್ಮ ಕ್ಯಾಲೆಂಡರ್ ಮಾಡಿಸಿದ್ದೇವೆ ದುಡ್ಡು ಕೊಡಿ ಸಾರ್' ಎಂದು ಹೇಳುತ್ತಾರೆ. ನೀನು ನಮ್ಮ ಕಡೆಯ ಪತ್ರಿಕೆಯವರನಲ್ಲಪ್ಪ ಎಂದು ಹೇಳ ಬೇಕಾಗುತ್ತದೆ. ಒಬ್ಬ ಬಿಜಾಪುರ ಪತ್ರಿಕೆಯವರು ಬಿಜಾಪುರದಿಂದ ಕಾರ್ ತೆಗೆದುಕೊಂಡು ಬಂದಿದ್ದಾನಂತೆ. ತೆಗೆದುಕೊಂಡು ಬರುವುದು, ನಮಗೆ, ನಿಮ್ಮ ಫೋಟೋ ಹಾಕಿದ್ದೇವೆ ರೊಕ್ಕ ಕೊಡಿ ಎಂದು ಕೇಳುವುದು. ಏನಕ್ಕೆ ನನ್ನ ಫೋಟೋ ಹಾಕಿದೆ. ನಾನೇನು ಮಾಡಬೇಕಾಗಿದೆ ಎಂದರೆ, ಅದು ಒಂದು ಉದ್ಯೋಗವಾಗಿದೆ. ಈ ತರಹ ಹಿಂಸೆ ಮಾಡುವ, blackmail ಮಾಡುವ ಪತ್ರಿಕೆಗಳು ಬಹಳಷ್ಟು ಹುಟ್ಟಿಕೊಂಡಿದ್ದಾರೆ. ಅವುಗಳಿಗೆ ಕಡಿವಾಣ ಹಾಕಬೇಕಾದರೆ, ನಾವು ಕಠಿಣವಾದ ಕ್ರಮವನ್ನು ತೆಗೆದುಕೊಳ್ಳಬೇಕು. ಈ ವರದಿಗಾರ ಮಾಡಿರುವುದನ್ನು ಈಗಾಗಲೇ ಹೇಳಿರುವ ಹಿನ್ನಲೆಯಲ್ಲಿ ಅವನಿಗೆ ಶಿಕ್ಷೆ ಆಗಲೇ ಬೇಕು, ಈಗಾಗಲೇ ಕೆಲವು ಸದಸ್ಯರು ಹೇಳಿದ ಹಾಗೆ ಈ ಮನೆಯಲ್ಲಿ unanimous resolution pass ಮಾಡಿ, ಅವರನ್ನು ಗಲ್ಲಿಗೆ ಕಳುಹಿಸತಕ್ಕಂಥ. ಜೈಲಿಗೆ ಕಳುಹಿಸತಕ್ಕಂಥ ಶಿಕ್ಷೆ ಆಗಬೇಕೆನ್ನುವುದಕ್ಕೆ ನಾವೆಲ್ಲರೂ ಕೂಡ ಒತ್ತಾಯ ಮಾಡುತ್ತೇವೆ. ಇದಾದರೆ ಅವರಿಗೂ ಕೂಡ, ಸ್ವಲ್ಪ ಎಚ್ಚರಿಕೆಯಿಂದ ಬರೆಯಬೇಕೆನ್ನುವ ಭಾವನೆ ಬರುತ್ತದೆ ಎಂದು ಹೇಳಿ ಮನವಿ ಮಾಡುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಸುಮಾರು ಒಂದೂವರೆ ಗಂಟೆಯಿಂದ ಸುಮಾರು 75 ನಿಮಿಷಗಳ ಕಾಲ ಸದನದಲ್ಲಿ ಬಹಳ ಒಂದು ಗಂಭೀರವಾದ ವಿಷಯದ ಬಗ್ಗೆ ಚರ್ಚೆ ನಡೆದಿದೆ. ಸದನದ ಎಲ್ಲಾ ಭಾಗದ ಮಾನ್ಯ ಸದಸ್ಯರು ನಮ್ಮ ಭಾವನೆಗಳನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ. ನಮ್ಮ ಮುಂದೆ 2011-12ನೇ ಸಾಲಿನ ಹಕ್ಕುಬಾಧ್ಯತಾ ಸಮಿತಿಯ 5ನೇ

ವರದಿಯನ್ನು ಸದನದ ಮುಂದೇನು ಮಂಡಿಸಲಾಗಿದೆ ಆ ಕುರಿತು ಚರ್ಚೆಯಾಗಿದೆ. ಇವತ್ತು ಬಹಳಷ್ಟು ಸದಸ್ಯರು ಕೆಲವು ಮಾಧ್ಯಮಗಳಲ್ಲಿ ಆಗುತ್ತಿರುವ ರಾಜಕಾರಣದ, ರಾಜಕಾರಣಿಗಳ ತೇಜೋವಧೆ ಕುರಿತು ತಮ್ಮದೇ ಆದ ರೀತಿಯಲ್ಲಿ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ತಮ್ಮೆಗೆಲ್ಲರಿಗೂ ಕೂಡ ಗೊತ್ತಿದೆ. ನಾವೆಲ್ಲರೂ ಕೂಡ ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಅಪಾರವಾದ ನಂಬಿಕೆ. ಭರವಸೆಗಳನ್ನಿಟ್ಟುಕೊಂಡಿರುವವರು. ಅನೇಕ ವರ್ಷ ದಶಕಗಳಿಂದ Freedom of Press ಏನಿದೆ. ಆ ಕುರಿತು ನಮ್ಮ ನಿಲುವನ್ನು ಪ್ರತಿಪಾದಿಸುತ್ತಾ ಬಂದಿದ್ದೇವೆ. ವಿಶೇಷವಾಗಿ ಈ ಸಂದರ್ಭದಲ್ಲಿ ಹೇಳಬೇಕೆಂದರೆ, 1975–1977ರ ಅವಧಿಯಲ್ಲಿ ಪತ್ರಿಕಾ ಸ್ವಾತಂತ್ರ್ಯವನ್ನು ಯಾವಾಗ ಹರಣ ಮಾಡಲಾಗಿತ್ತು. ಆಗಲೂ ಕೂಡ ಅದರ ವಿರುದ್ಧ ಬಲವಾಗಿ ಪ್ರತಿಭಟಿಸಿ ಆ ಒಂದು ಸಾರ್ವಜನಿಕ ಚಳುವಳಿಯಿಂದ ಬಂದ ಅನೇಕರು ಇಲ್ಲಿದ್ದೇವೆ ನಿಜ. ಇವತ್ತು ಕೆಲವು ಮಾಧ್ಯಮಗಳಲ್ಲಿ ಒಂದು ನೀತಿ ಅವಹೇಳನಕಾರಿಯಾಗಿ ರಾಜಕಾರಣದ ಬಗ್ಗೆ. ರಾಜಕಾರಣಿಗಳ ಬಗ್ಗೆ ಬರುತ್ತಿರುವುದನ್ನು ಕೂಡ ನಾವು ಗಮನಿಸಿದ್ದೇನೆ. ಅನೇಕರು ಕೂಡ ಇದಕ್ಕೆ ಶಿಕಾರಿಗಳಾಗಿದ್ದಾರೆ. ಬಲಿ ಕೂಡ ಆಗಿದ್ದಾರೆ. ಈಗಾಗಲೇ ಒಬ್ಬ ಸದಸ್ಯರು ಹೇಳಿದಂತೆ. ಈ ಒಂದು ಸ್ಪರ್ಧಾ ಯುಗದಲ್ಲಿ ಸ್ಪರ್ಧೆಗೋಸ್ಕರ ಆ ಪದ ಬಳಕೆಯಲ್ಲಿ ಮತ್ತು ಪೂರ್ಣ ಸತ್ಯ ಹೇಳುವುದರಲ್ಲಿ ಅನೇಕ ಲೋಪದೋಷಗಳಾಗುತ್ತಿರುವುದನ್ನೂ ಕೂಡ ನಾವು ನೋಡಿದ್ದೇವೆ. ನಾನು ಈ ಸಂದರ್ಭದಲ್ಲಿ ವಿಶೇಷವಾಗಿ ದೃಶ್ಯ ಮಾಧ್ಯಮಗಳಲ್ಲಿ ಆಗುತ್ತಿರುವ ಒಂದು ವಿಚಾರವನ್ನು ನನ್ನ ಅನುಭವವನ್ನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ. ಸನ್ಮಾನ್ಯ ಸಭಾಧ್ಯಕ್ಷರೆ, ನಮಗೆ ಗೊತ್ತಿದೆ, ಪ್ರತಿ ಅರ್ಧ ಗಂಟೆಗೆ ಮತ್ತು ಒಂದು ಗಂಟೆಗೆ ನಾವು ಇವತ್ತು news ನೋಡುತ್ತಿದ್ದೇವೆ. ಅವರ ಮಧ್ಯೆ Breaking News ಕೂಡ ಬರುತ್ತದೆ. ಬಹಳ ಸಲ Breaking News ಎನ್ನುವುದು Heart Breaking News ಆಗಿರುತ್ತದೆ. ಇದರ ಪರಿಣಾಮ ಕೂಡ ಏನೇನೋ ಆಗುತ್ತಿದೆ. ಒಂದು ವಿಚಿತ್ರವಾದ ಪ್ರಸಂಗ ಕಳೆದ 3–4 ವರ್ಷಗಳ ಹಿಂದೆ ಆಯಿತು. ನಮಗೆಲ್ಲಾ ಗೊತ್ತಿದೆ. ರಾಜ್ಯದಲ್ಲಿ ವಿಶೇಷವಾಗಿ ಕರಾವಳಿ ಭಾಗದಲ್ಲಿ ಚರ್ಚ್‌ಗಳ ಮೇಲೆ ಸಾಕಷ್ಟು

attacks, ಹಲ್ಲೆ ಎಲ್ಲಾ ಆಗಿತ್ತು. ಆ ಸಂದರ್ಭದಲ್ಲಿ ಅಂದಿನ ಗೃಹ ಸಚಿವರಾಗಿದ್ದ ದಿವಂಗತ ಡಾ॥ ವಿ.ಎಸ್. ಆಚಾರ್ಯರವರು ಮಂಗಳೂರಿಗೆ ಭೇಟಿ ಕೊಟ್ಟಿದ್ದರು. ಅವರು ಮಂಗಳೂರಿಗೆ ಭೇಟಿ ಕೊಟ್ಟು ಆ ಚರ್ಚ್‌ಗಳ ಸ್ಥಳಕ್ಕೆಲ್ಲಾ ಭೇಟಿ ಕೊಟ್ಟು, ಆಸ್ಪತ್ರೆಗಳಿಗೆ ಹೋಗಿ, ಆಸ್ಪತ್ರೆಗಳಲಿದ್ದ ನೊಂದವರಿಗೆ ಸಾಂತ್ವನವನ್ನು ನುಡಿದು, ಆಚೆ ಬರುತ್ತಿದ್ದರು. ಅವರು ಆಚೆ ಬರುತ್ತಿದ್ದಾಗ ಇವರು Home Minister ಆಗಿದ್ದರಿಂದ ಸುತ್ತಲೂ ಪೊಲೀಸರಿದ್ದರು. ಒಬ್ಬರು ಮಹಿಳೆ. ಇದೇನು ಇಷ್ಟೊಂದು ಜನ ಪೊಲೀಸರು ಹೋಗುತ್ತಿದ್ದಾರಲ್ಲಾ ಎಂದು ಇವರನ್ನು ನೋಡಿದಳು. ಇವಳು ಯಾರು? ಎಂದು ಯಾರನ್ನೋ ಕೇಳಿದರು. 'ಅವರು ಹೋಮ್ ಮಿನಿಸ್ಟರ್ ಅಮ್ಮಾ' ಎಂದು ಯಾರೋ ಹೇಳಿದರು. Home Minsiter ಎಂದರೆ ಯಾರು? ಎಂದು ಆಕೆ ಕೇಳಿದಳು. 'ಅಂದರೆ ಪೊಲೀಸ್ ಮಿನಿಸ್ಟ್ರು' ಎಂದು ಹೇಳಿದರು. ಹೌದಾ? ಎಂದು ಆಕೆ ಧೈರ್ಯದಿಂದ ಬಂದು, ವಿ.ಎಸ್. ಆಚಾರ್ಯರವರನ್ನು ನಿಲ್ಲಿಸಿ. 'ಸಾರ್ ಒಂದು ಪ್ರಶ್ನೆ ಎಂದಳು. ಅವರು 'ಏನಮ್ಮಾ' ಎಂದರು 'ಸಾರ್ ನಿನ್ನೆ ಆ ಕೆಂಪು ಆಂಗಿ ಹಾಕಿಕೊಂಡವನಿಗೆ ಬೆಳಿಗ್ಗೆಯಿಂದ ಸಂಜೆಯವರೆಗೂ ಹೊಡೆದರು. ಅವರು ಬದುಕಿದ್ದಾನಾ? ಎಂದು ಕೇಳಿದರು. ಇವರಿಗೆ ಅದು ಅರ್ಥವಾಗಲಿಲ್ಲ. ಯಾರಿಗೂ ಅರ್ಥವಾಗಲಿಲ್ಲ. ಅಲ್ಲಿ ಆಗಿದ್ದೇನೆಂದರೆ ಹೊಡೆದಿದ್ದು maximum 5 ರಿಂದ 10 seconds ಮಾತ್ರ ಪ್ರತಿ ಅರ್ಧ ಗಂಟೆಗೊಮ್ಮೆ ಮತ್ತು ಒಂದು ಗಂಟೆಗೊಮ್ಮೆ ಅದನ್ನು ತೋರಿಸಿ, ತೋರಿಸಿ, ಪಾಪ ಆ ಮುಗ್ಧ ಮಹಿಳೆ, ಬೆಳಿಗ್ಗೆಯಿಂದ ಸಂಜೆಯವರೆಗೂ ಚುಚ್ಚುತ್ತಿದ್ದರು ಎಂದು ಅಂದುಕೊಂಡಿದ್ದಳು. ಇದು ಸ್ವಾಭಾವಿಕವಾಗಿ ಎಲ್ಲರಿಗೂ ಕೂಡ ನೋಡಿರುವ ಒಂದು ಸಂಗತಿಯಾಗಿದೆ. ಇವತ್ತು ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಮತ್ತೊಮ್ಮೆ ನಾನು ಹೇಳುತ್ತೇನೆ, ನಮ್ಮೆಲ್ಲರಿಗೂ ಕೂಡಾ ಹೆಮ್ಮೆ ಇದೆ. ಮಹಾನ್ ಮಹಾ ಪತ್ರಕರ್ತರನ್ನು ಈ ದೇಶ ನೋಡಿದೆ. ದೇಶಭಕ್ತ ಪತ್ರಕರ್ತರನ್ನು ನೋಡಿದೆ. ಸ್ವತಃ ಮಹಾತ್ಮ ಗಾಂಧಿಯವರೆ, one of the greatest journalists this land has produced "Harijan" ಇರಬಹುದು. "Young India' ಇರಬಹುದು. ಎಲ್ಲವನ್ನೂ ಕೂಡ ನೋಡಿದ್ದೇವೆ. ಆದರೆ, ಮಾನ್ಯ

ಜಯಚಂದ್ರರವರೆ, ಎಲ್ಲೋ ಒಂದು ಕಡೆ freedom of press ಮತ್ತು license ಗೆ ಇವತ್ತು ವ್ಯತ್ಯಾಸ ಗೊತ್ತಾಗುತ್ತಿಲ್ಲ. Freedom is being slowly converted or used as a license. License to write anything against anybody using any word. ಆಗಲೇ ಮಾನ್ಯ ನರೇಂದ್ರ ಬಾಬುರವರು ಪದಗಳ ಉಪಯೋಗ ಯಾವ ರೀತಿ ಆಗುತ್ತಿದೆ ಎಂದು ಹೇಳಿದರು. ಆದಾಗ ನೋಡುವವರಿಗೆ ಬಹಳ ಖುಷಿ ಕೊಡಬಹುದು. ಮಸಾಲೆಪುರಿ ಅಥವಾ ಕಾಂಗ್ರೆಸ್ ಕಡ್ಲೇಕಾಯಿ ಬೀಜ ತಿಂದಂತೆ ಬಹಳ ರುಚಿಯಾಗಿ ಇರಬಹುದು. ಆದರೆ ಅನುಭವಿಸುವುದು ಇದೆಯಲ್ಲಾ. ಆ ಅನುಭವಿಸುವವರ ತೊಳಲಾಟ, ಅನುಭವಿಸುವವರಿಗೆ ಮಾತ್ರ ಗೊತ್ತು. ಅವರು ಯಾವ ಹತ್ತಿರವೂ ಬಂದು ಹೇಳಿಕೊಳ್ಳುವುದಕ್ಕಾಗುವುದಿಲ್ಲ. ಈ ಒಂದು ಪರಿಸ್ಥಿತಿಯನ್ನು ಎಲ್ಲರೂ ಕೂಡ, ಪ್ರಾಯಶಃ ಎಲ್ಲಾ ಸಹ ಸದಸ್ಯರೂ ಒಂದಲ್ಲ ಒಂದು ಬಾರಿ ಅನುಭವಿಸಿಯೇ ಇದ್ದಾರೆ. ಈ ಕುರಿತು ಕೇವಲ ನಾವು ಮಾತ್ರ ಚರ್ಚೆ ಮಾಡುತ್ತಿಲ್ಲ. ಮಾಧ್ಯಮ ರಂಗದಲ್ಲೂ ಕೂಡ ಬಹಳ ಗಂಭೀರವಾಗಿ ಇದರ ಬಗ್ಗೆ ಚರ್ಚೆ ನಡೆಯುತ್ತಿದೆ. ಯಾರೋ ಕೆಲವರು because of a few black sheep, entire media ಗೆ ಏಕೆ ಈ ಕೆಟ್ಟ ಹೆಸರು ಬರುತ್ತಿದೆ ಎನ್ನುವುದೂ ಕೂಡ ಇವತ್ತು ಬಹಳ ಗಂಭೀರವಾಗಿ ಚರ್ಚೆ ನಡೆಯುತ್ತಿದೆ. ಎಲ್ಲಾ ಮಾಧ್ಯಮಗಳೂ ಹಾಗಲ್ಲ. ಇವತ್ತು ಕೂಡಾ ಆ ಒಂದು ಆರೋಗ್ಯಕರ ಭಾವನೆಯನ್ನು ತಮ್ಮ ಉದ್ದೇಶವನ್ನು ಎತ್ತಿ ಹಿಡಿದು ಪತ್ರಿಕಾ ರಂಗದಲ್ಲಿ ಕೆಲಸ ಮಾಡಿದವರು ಅನೇಕ ಪತ್ರಕರ್ತರಿದ್ದಾರೆ. ಅನೇಕ ಪತ್ರಿಕೆಗಳಿವೆ. ಆದರೆ ಎಲ್ಲಾ ಕಡೆ ಈ black sheep ಇರುವ ಹಾಗೆ, ಸಾಧಾರಣ enttire ಕ್ಷೇತ್ರಕ್ಕೇ ಇವತ್ತು ಕೆಟ್ಟ ಹೆಸರು ಬರುತ್ತಿದೆ. ಈ ಒಂದು ನಿಟ್ಟಿನಲ್ಲಿ ಇವತ್ತು ಎಲ್ಲಾ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ಸನ್ಮಾನ್ಯ ಅಭಯ ಪಾಟೀಲ್‌ರವರು ಮತ್ತು ಶಾಮ ಭೀಮಾ ಘಾಟಗೆಯವರು ಬೆಳಗಾಂನಲ್ಲಿ ಈಗಾಗಲೇ ಈ ವರದಿಯಲ್ಲಿ ಪ್ರಸ್ತಾಪವಾಗಿರುವ ರೀತಿಯಲ್ಲಿ ಆದರಲ್ಲೇ ಬಂದಿರುವ ಅನೇಕ ಉದಾಹರಣೆಗಳಿಂದ ನೋಡಿದಾಗ, ಅವರು ಯಾವ ರೀತಿಯ ಆನುಮಾನವನ್ನು ಅನುಭವಿಸಿರಬಹುದು. ನೋವನ್ನು ಅನುಭವಿಸಿರಬಹುದು

ಎಂಬ ಬಗ್ಗೆ ಇವತ್ತು ನಮ್ಮೆಲ್ಲರಿಗೂ ಕೂಡ ಗೊತ್ತಾಗಿದೆ. ಇವತ್ತು ಈ ಹಂತದಲ್ಲಿ ನಾನು ವಿಶೇಷವಾಗಿ, ಮಾನ್ಯ ಸಭಾಧ್ಯಕ್ಷರೆ, ಇದೊಂದು ದೊಡ್ಡ subject ಬಹಳ ದೊಡ್ಡ subject, Supreme Court ನಲ್ಲೂ ಕೂಡಾ ಇದರ ಬಗ್ಗೆ ಚರ್ಚೆ ನಡೆಯುತ್ತಿದೆ. Press Council ನಲ್ಲಿ ಇವತ್ತು ಚರ್ಚೆ ನಡೆಯುತ್ತಿದೆ. ಪತ್ರಿಕಾ ರಂಗದಲ್ಲೂ ಕೂಡ ಇವತ್ತು ಚರ್ಚೆ ನಡೆಯುತ್ತಿದೆ. ಹೇಗೆ? ನಾವು ಹೇಗೆ ಮುಂದಕ್ಕೆ ಹೋಗಬೇಕು? ಏನಾದರೂ ಫ್ರೇಮ್‌ವರ್ಕ್ ಹಾಕಿಕೊಳ್ಳಬೇಕೇ? ಅದು ತಾನೇ ಒಳಗಡೆ ವಿಧಿಸಿಕೊಳ್ಳಬೇಕಾದ ಫ್ರೇಮ್ ವರ್ಕೇ? ಅದನ್ನು ಹೊರಗಡೆ ವಿಧಿಸಬೇಕಾ? ಇದೆಲ್ಲವೂ ಕೂಡಾ ಚರ್ಚೆ ನಡೆಯುತ್ತಿದೆ. ಸನ್ಮಾನ್ಯ ಸದಸ್ಯರೊಬ್ಬರು ಒಬ್ಬ ಪತ್ರಕರ್ತನಿಗೆ qualification ಇರಬೇಕು ಎಂದು ಹೇಳಿದರು. ಈ qualifciation ವಿಷಯ ಬಂದಾಗ, ಹೊರಗಡೆ ಕೆಲವು ಜನರು ಇರುತ್ತಾರೆ. Policitician ಆಗುವುದಕ್ಕೂ ಸಹ quailification ಬೇಕು ಎಂದು ಅವರು ಹೇಳುತ್ತಾರೆ. ಅದಕ್ಕೋಸ್ಕರ ಆ ಒಂದು ವ್ಯಾಪ್ತಿಗೆ ನಾವು ಹೋಗದೆ, ಇವತ್ತು ನಮ್ಮ ಮುಂದೆ ಒಂದು ನಿರ್ದಿಷ್ಟವಾದ ವಿಷಯವಿದೆ. ನಮ್ಮ ಹಕ್ಕುಬಾಧ್ಯತಾ ಸಮಿತಿ ವಿಶೇಷವಾಗಿ ಬೆಳಗಾಂನ 'ತರುಣ್ ಭಾರತ್ ಪತ್ರಿಕೆ' ಆ 'ತರುಣ್ ಭಾರತ್' ಮರಾಠಿ ದಿನಪತ್ರಿಕೆಯ ಸಂಪಾದಕರ ಮೇಲೆ ಒಂದು ವಿಚಾರಣೆಯನ್ನು ನಡೆಸಿ, ತನಿಖೆಯನ್ನು ನಡೆಸಿ, ಅವರಿಗೆ ಅವಕಾಶವನ್ನೂ ಸಹ ಕೊಟ್ಟು ವರದಿಯೊಂದನ್ನು ಸದನಕ್ಕೆ ನೀಡಿದೆ. ಅವರಿಗೆ ಅವಕಾಶ ಕೊಟ್ಟಾಗಲೂ ಕೂಡಾ, ಆ ಸದನದ ಸಮಿತಿ ಮುಂದೆ ಅವರು ಹೇಗೆ ನಡೆದುಕೊಂಡಿದ್ದಾರೆ ಎನ್ನುವುದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. in fact, ಸದನದ ಸಮಿತಿಗೆ ಅಗೌರವ ತೋರಿಸುವುದೂ ಕೂಡ it attracts privilege, it attracts contempt ಈ ದೃಷ್ಟಿಯಿಂದ ನಾನು ಸಭೆಯ ಎಲ್ಲರ ಭಾವನೆಗಳನ್ನು ಗ್ರಹಿಸಿ ಸಭಾಧ್ಯಕ್ಷರೆ, ತಮ್ಮ ಮುಂದೆ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಅದನ್ನು ಸಭೆಯ ಮುಂದಿಟ್ಟು ಸಭೆಯ ಅಭಿಪ್ರಾಯ ಕೇಳಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಪ್ರಸ್ತಾವ

ಸನ್ಮಾನ್ಯ ಸಭಾಧ್ಯಕ್ಷರೆ,

'ತರುಣ್ ಭಾರತ್' ಮರಾಠಿಯ ದಿನಪತ್ರಿಕೆಯ ಸಂಪಾದಕರಾದ ಶ್ರೀ ಕಿರಣ್ ಠಾಕೂರ್‌ರವರನ್ನು ಸದನಕ್ಕೆ ಕರೆಸಿ ಗರಿಷ್ಠ ವಾಗ್ದಂಡನೆಯನ್ನು ವಿಧಿಸಲು ಮತ್ತು ಆ ಪತ್ರಿಕೆಯ ಮಾನ್ಯತೆಯನ್ನು ರದ್ದುಪಡಿಸುವ ಕುರಿತು ಸದನವು ವ್ಯಕ್ತಪಡಿಸಿರುವ ಭಾವನೆಯನ್ನು ಪತ್ರಿಕಾ ಪರಿಷತ್‌ಗೆ ಶಿಫಾರಸ್ಸು ಮಾಡಲು ಹಾಗೂ ಶ್ರೀ ಅಭಯ್ ಪಾಟೀಲ್ ಮತ್ತು ಶ್ರೀ ಶಾಮ ಭೀಮ ಘಾಟಗೆ ಅವರಿಗೆ ಶ್ರೀ ಕಿರಣ್ ಠಾಕೂರ್ ಅವರು ಬಹಿರಂಗವಾಗಿ ಕ್ಷಮೆ ಯಾಚಿಸಬೇಕೆಂದು ಈ ಸದನವು ಸರ್ವಾನುಮತದಿಂದ ತೀರ್ಮಾನಿಸುತ್ತದೆ"

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಗಳ ನಿಯಮಾವಳಿಗಳ ನಿಯಮ 197ರ ಮೇರೆಗೆ ಸದರಿ ಪತ್ರಿಕಾ ಸಂಪಾದಕರನ್ನು ಈ ಸದನದ ಮುಂದೆ ಕರೆಯಿಸಿ, ಈ ಸದನದ ತೀರ್ಮಾನವನ್ನು ಜಾರಿಗೆ ತರುವುದರಿಂದ ಈ ಸದನದ ಮತ್ತು ಸದಸ್ಯರ ಹಕ್ಕು ಮತ್ತು ಘನತೆಯನ್ನು ಕಾಪಾಡಿದಂತಾಗುತ್ತದೆ ಎಂಬುದು ಈ ಸದನದ ಅಭಿಪ್ರಾಯವಾಗಿದೆ. ಆದುದರಿಂದ ಈ ಪ್ರಸ್ತಾವನೆಯನ್ನು ಅಂಗೀಕರಿಸಬೇಕೆಂದು ನಾನು ಕೋರುತ್ತೇನೆ.

ಶ್ರೀ ಕೆ.ಜಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಕಾನೂನಿನಲ್ಲಿ ಅವಕಾಶವಿದ್ದರೆ, ಅವರನ್ನು ಜೈಲಿಗೂ ಕಳುಹಿಸಿಕೊಡಬೇಕೆಂಬುದು ನನ್ನ ಮನವಿಯಾಗಿದೆ.

ಅಧ್ಯಕ್ಷರು : ಅವರು ನಾಳೆ ಕೋರ್ಟಿಗೆ ಹೋದರೆ, ಅದಕ್ಕೆ ನೀವು ಉತ್ತರ ಕೊಡುವುದಿಲ್ಲ.

ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮಂಡಿಸಿದ ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ. ಪ್ರಸ್ತಾವವು ಹೀಗಿದೆ.

"ತರುಣ್ ಭಾರತ್' ಮರಾಠಿ ದಿನಪತ್ರಿಕೆಯ ಸಂಪಾದಕರಾದ ಶ್ರೀ ಕಿರಣ್ ಠಾಕೂರ್‌ರವರನ್ನು ಸದನಕ್ಕೆ ಕರೆಸಿ ಗರಿಷ್ಠ ವಾಗ್ದಂಡನೆಯನ್ನು ವಿಧಿಸಲು ಮತ್ತು ಆ ಪತ್ರಿಕೆಯ ಮಾನ್ಯತೆಯನ್ನು ರದ್ದುಪಡಿಸುವ ಕುರಿತು ಸದನವು ವ್ಯಕ್ತಪಡಿಸಿರುವ ಭಾವನೆಯನ್ನು ಪತ್ರಿಕಾ ಪರಿಷತ್‌ಗೆ ಶಿಫಾರಸ್ಸು

ಮಾಡಲು ಹಾಗೂ ಶ್ರೀ ಅಭಯ್ ಪಾಟೀಲ್ ಮತ್ತು ಶ್ರೀ ಶಾಮಾ ಭೀಮಾ ಘಾಟಗೆ ಅವರಿಗೆ ಶ್ರೀ ಕಿರಣ್ ಠಾಕೂರ್ ಅವರು ಬಹಿರಂಗವಾಗಿ ಕ್ಷಮೆ ಯಾಚಿಸಬೇಕೆಂದು ಈ ಸದನಕ್ಕೆ ತೀರ್ಮಾನಿಸುತ್ತದೆ"

ಪ್ರಸ್ತಾವದ ಪರವಾಗಿರುವವರು 'ಹೌದು' ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು 'ಇಲ್ಲ' ಎಂದು ಸೂಚಿಸಬೇಕು

ಪ್ರಸ್ತಾವವು 'ಹೌದು' ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು 'ಹೌದು' ಎನ್ನುವವರ ಪರವಾಗಿದೆ

ಪ್ರಸ್ತಾವವು 'ಹೌದು' ಎನ್ನುವವರ ಪರಿವಾಗಿದೆ

ಪ್ರಸ್ತಾವವು 'ಹೌದು' ಎನ್ನುವವರ ಪರವಾಗಿದೆ

ಪ್ರಸ್ತಾವವು **ಸರ್ವಾನುಮತದಿಂದ ಅಂಗೀಕೃತವಾಗಿದೆ**

ಸಂಪಾದಕರಾದ ಶ್ರೀ ಕಿರಣ್ ಠಾಕೂರ್ ಅವರನ್ನು ದಿನಾಂಕ 30-07-2012ರ ಸೋಮವಾರದಂದು ಬೆಳಿಗ್ಗೆ 10 ಗಂಟೆಗೆ ಸದನದ ಮುಂದೆ ಹಾಜರಾಗಲು ಸೂಚನೆ ನೀಡುವಲ್ಲಿ ಸದನದ ಅಭಿಪ್ರಾಯವನ್ನು ತೋರುತ್ತೇನೆ.

ಸದನದ ಸಹಮತಿ ಇದಕ್ಕೆ ದೊರಕಿದೆ ಎಂದು ಭಾವಿಸುತ್ತೇನೆ.

ಈಗ ಸದನವನ್ನು ಮಧ್ಯಾಹ್ನ 3 ಗಂಟೆಗೆ ಸೇರುವಂತೆ ಮುಂದೂಡಸಲಾಗಿದೆ.

(ಸದನವನ್ನು ಮಧ್ಯಾಹ್ನ 1.51 ಗಂಟೆಗೆ ಮುಂದೂಡಲಾಯಿತು. ಸದನವು ಪುನಃ ಮಧ್ಯಾಹ್ನ 3 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

(ಸಭೆಯ ಕಲಾಪವು 3.00 ಗಂಟೆ 0.29 ನಿಮಿಷಕ್ಕೆ ಪ್ರಾರಂಭವಾಯಿತು. ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಅಧ್ಯಕ್ಷರು : ಈಗ ಶೂನ್ಯ ವೇಳೆ ಪ್ರಸ್ತಾಪ.

ಶ್ರೀ ಎನ್. ಸಂಪಂಗಿ : ಮಾನ್ಯ ಅಧ್ಯಕ್ಷರೆ, ನನಗೆ ಸಂಬಂಧಪಟ್ಟ ವಿಷಯಕ್ಕೆ ಉತ್ತರ ಬರಬೇಕು

ಅಧ್ಯಕ್ಷರು : ಶೂನ್ಯವೇಳೆ ಪ್ರಸ್ತಾಪ ಆದ ಮೇಲೆ ತಮಗೆ ಉತ್ತರ ಕೊಡಿಸುತ್ತೇನೆ. ಈಗ ಪ್ರಕಾಶ್ ಹುಕ್ಕೇರಿಯವರು ಕೇಳಿ.